ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 10 | ಸಂಚಿಕೆ 11 | ನವೆಂಬರ್ 2025



ಸುತ್ತೂರು ಶ್ರೀಮಠದಲ್ಲಿ ಜರುಗಿದ 128ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಹದಿನೈದು ಜೋಡಿ ವಧೂವರರು ಸತಿಪತಿಗಳಾದರು. ಮಹಾವಿದ್ಯಾಪೀಠದ ಅಧಿಕಾರಿಗಳು ಮತ್ತು ಮೈಸೂರಿನ ಚಾಮರಾಜೇಶ್ವರಿ ಅಕ್ಕನ ಬಳಗದ ಸದಸ್ಯರುಗಳಿದ್ದಾರೆ. (29 ಅಕ್ಟೋಬರ್ 2025)




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದ ಗ್ಯಾಲರಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟನ್ನು ಅನಾವರಣಗೊಳಿಸಲಾಯಿತು. ಆ ಸಂದರ್ಭದಲ್ಲಿ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ವೆಬ್‌ಸೈಟ್ ಸಿದ್ಧಪಡಿಸಿದ ತಂಡದವರು ಉಪಸ್ಥಿತರಿದ್ದರು (17 ಅಕ್ಟೋಬರ್ 2025)



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಸಂಸ್ಕೃತೋತ್ಸವದಲ್ಲಿ ವಿದ್ವಾಂಸರುಗಳಾದ ಡಾ. ಎಚ್.ವಿ. ನಾಗರಾಜರಾವ್, ಡಾ. ಕೆ.ಜಿ. ಪುಟ್ಟಹೊನ್ನಯ್ಯ ಮತ್ತು ಪ್ರೊ. ಎಂ. ಮಲ್ಲಣ್ಣನವರುಗಳನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಶ್ರೀ ಟಿ.ಎಸ್, ಶ್ರೀವತ್ಸ, ಪ್ರೊ. ವಿ. ಗಿರೀಶ್ ಚಂದ್ರ, ಹರವೆ ಶ್ರೀಗಳು, ಡಾ. ರೇಚಣ್ಣ ಹಾಗೂ ಸಂಸ್ಕೃತ ಆಧ್ಯಾಪಕರುಗಳಿದ್ದಾರೆ (17 ಅಕ್ಟೋಬರ್ 2025)

## ಗಾಂಧೀಜಿ ಮತ್ತು ಶಾಸ್ತ್ರೀಜಿ ದಿನಾಚರಣೆ
## ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು



**ಸುತ್ತೂರಿನ ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳ** ಆಶ್ರಯದಲ್ಲಿ ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಹಾಗೂ ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನಾಚರಣೆಯನ್ನು ದಿನಾಂಕ 2.10.2025 ರಂದು ಆಚರಿಸಲಾಯಿತು.

ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಮಾತನಾಡುತ್ತಾ, ಮಹಾತ್ಮಾ ಗಾಂಧೀಜಿಯವರು ಸರಳ ವ್ಯಕ್ತಿತ್ವದವರಾಗಿದ್ದರು. ಆಕಾರದಲ್ಲಿ ಚಿಕ್ಕವರಿದ್ದರೂ ವ್ಯಕ್ತಿತ್ವದಲ್ಲಿ ದೊಡ್ಡವರಾಗಿದ್ದರು. ಅವರ ಜೀವನವೇ ಒಂದು ಸಂದೇಶವಾಗಿದೆ. ಇಂದಿನ ಪೀಳಿಗೆಯವರು ಗಾಂಧೀಜಿಯವರ ಸಂದೇಶವನ್ನು ಸದಾಕಾಲ ಸ್ಮರಿಸಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆನೀಡಿದರು.

ಲಾಲ್ ಬಹದ್ದೂರ್ ಶಾಸ್ತ್ರಿಜಿಯವರು ಕಡು ಬಡತನದಲ್ಲಿ ಹುಟ್ಟಿ ಪ್ರಧಾನಮಂತ್ರಿಯ ಪಟ್ಟಕ್ಕೆ ಏರಿದವರು. ಮೃದುಭಾಷಿಗಳಾಗಿದ್ದ ಶಾಸ್ತ್ರಿಯವರು ದೇಶದ ಕಷ್ಟದ ಸಮಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೂಲಕ ಹೆಸರುವಾಸಿಯಾಗಿದ್ದರು. ದೇಶದ ಭದ್ರತೆಗಾಗಿ ಜೈಜವಾನ್ ಹಾಗೂ ಆಹಾರ ಭದ್ರತೆಗಾಗಿ ಜೈಕಿಸಾನ್ ಘೋಷಣೆಯನ್ನು ಮೊಳಗಿಸಿದರು. ಅವರ ಸರಳ ಜೀವನವು ಇಂದಿನ ಪೀಳಿಗೆಯವರಿಗೆ ಮಾರ್ಗದರ್ಶಕವಾಗಿದೆ ಎಂದು ತಿಳಿಸಿದರು.

ಅಂತಾರಾಷ್ಟ್ರೀಯ ಹಿರಿಯರ ದಿನಾಚರಣೆ ಅಂಗವಾಗಿ ಜೆಎಸ್‌ಎಸ್ ಹಿರಿಯರ ಮನೆಯ ನಿವಾಸಿಯಾದ ಶ್ರೀಮತಿ ತುಳಸಿಮಾಲಾರವರು ಮಾತನಾಡಿ, ಅರವತ್ತರ ನಂತರ ಮರಳಿ ಅರಳುವುದಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲರೂ ದುಡಿಯಬೇಕಾಗಿದೆ, ಹಾಗಾಗಿ ಹಿರಿಯರ ಕಾಳಜಿ ಮಕ್ಕಳಿಗೆ ಕಷ್ಟಸಾಧ್ಯವಾಗಿದೆ. ಇದನ್ನು ಮನಗಂಡ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸುತ್ತೂರಿನ ಸುಂದರ ಪರಿಸರದಲ್ಲಿ ಹಿರಿಯರ ಮನೆಯನ್ನು ನಿರ್ಮಿಸಿ ನಮ್ಮಂಥವರಿಗೆ ಆಶ್ರಯವಾಗಿದ್ದಾರೆ ಎಂದು ಸ್ಮರಿಸಿದರು. ಶ್ರೀ ಸದಾನಂದರವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಶ್ರೀಮತಿ ಅನಿತಾರವರು ಕೊಡವ ಗೀತೆಯನ್ನು ಹಾಡಿದರು.

ಸಮಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥರು, ಹಿರಿಯ ನಾಗರಿಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಚಂದ್ರಮೌಳೇಶ್ವರ ಸ್ವಾಗತಿಸಿದರು. ಶ್ರೀ ಎನ್. ಕುಮಾರಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಕೆಂಡಗಣ್ಣಸ್ವಾಮಿಯವರು ವಂದಿಸಿದರು.

## ಲೈಂಗಿಕ ಸಂತ್ರಸ್ತರಿಗೆ ಲಭ್ಯವಿರುವ ಕಾನೂನು ಪರಿಹಾರಗಳ ಕುರಿತು ಜಾಗೃತಿ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಸಂತ್ರಸ್ತರಿಗೆ ಲಭ್ಯವಿರುವ ಕಾನೂನು ಪರಿಹಾರಗಳ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ವಾಣಿಶ್ರೀಯವರು ಮಾತನಾಡುತ್ತಿರುವುದು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಸಂತ್ರಸ್ತರಿಗೆ ಲಭ್ಯವಿರುವ ಕಾನೂನು ಪರಿಹಾರಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ವಾಣಿಶ್ರೀಯವರು ಮಾತನಾಡುತ್ತಾ ನಾವು ಕೆಲಸ ಮಾಡುವ ಸ್ಥಳದಲ್ಲಿ ಕನಿಷ್ಠ 10 ಮಂದಿ ಸದಸ್ಯರಿದ್ದರೂ ಆಂತರಿಕ ದೂರು ಸಮಿತಿಯನ್ನು ಮಾಡುವುದು ಅವಶ್ಯಕ. ಪೋಸ್ಕೋ ಕಾಯ್ದೆ ಮಹಿಳೆಯರ ಹಿತರಕ್ಷಣೆ ಮಾಡುವಂಥ ವಿಶೇಷ ಕಾನೂನು. ಇಂತಹ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ವಿದ್ಯಾರ್ಥಿ ಕಾರ್ಯದರ್ಶಿಗಳನ್ನು 3 ವರ್ಷಗಳಿಗೊಮ್ಮೆ ಬದಲಾಯಿಸಬೇಕು. ಕಾರ್ಯಕ್ಷೇತ್ರದಲ್ಲಿ ಪುರುಷರ ಪ್ರಾಬಲ್ಯದ ಪ್ರಭಾವವಿರುವುದರಿಂದ ಮಹಿಳೆಯರು, ಯುವತಿಯರು ಧೃತಿಗೆಡದೆ ತಮಗಾದ ಶೋಷಣೆಯ ಬಗ್ಗೆ ಮೂರು ತಿಂಗಳೊಳಗೆ ದೂರುಗಳನ್ನು ಸಲ್ಲಿಸುವುದು ಅಗತ್ಯ. ಹಾಗೂ, ದೂರು ಸಲ್ಲಿಸಿದ 60 ದಿನಗಳೊಳಗೆ ಬಾಧಿತರಿಗೆ ಪರಿಹಾರ ದೊರಕಿಸುವುದು ಐಸಿಸಿ ಸಮಿತಿಯ ಜವಾಬ್ದಾರಿಯಾಗಿದೆ ಎಂದರು.

## ಕ್ರೀಡಾಕೂಟದಲ್ಲಿ ಸಾಧನೆ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿನಿಯರು ಮೈಸೂರಿನ ಓವಲ್ ಮೈದಾನದಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ಅಂತರ ಕಾಲೇಜುಗಳ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಹಲವು ಪ್ರಶಸ್ತಿ, ಪದಕಗಳನ್ನು ಪಡೆದಿದ್ದಾರೆ. 100 ಮೀ ಓಟ ಮತ್ತು 200 ಮೀ ಓಟದ ಸ್ಪರ್ಧೆಯಲ್ಲಿ ಕು. ಎಚ್.ಎಸ್. ಹರ್ಷಿತರವರು ಚಿನ್ನದ ಪದಕ ಗಳಿಸಿರುವುದರ ಜೊತೆಗೆ "ಅತ್ಯುತ್ತಮ ಅಥ್ಲೆಟ್" ಗೌರವವನ್ನೂ ಪಡೆದಿರುತ್ತಾರೆ, ಕು. ಪಿ. ಭಾನವಿ ಗುಂಡು ಎಸೆತ ಮತ್ತು ತಟ್ಟೆ ಎಸೆತ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡಿರುತ್ತಾರೆ. ಹಾಗೆಯೇ, ಅಪೂರ್ವ ಮತ್ತು ತಂಡ 4x100 ಮೀ. ರಿಲೇ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕವನ್ನು ಪಡೆದಿರುತ್ತಾರೆ. ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ



3ನೇ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆಗೈದಿರುವ ವಿದ್ಯಾರ್ಥಿನಿಯರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ಮಂಟೆಲಿಂಗು, ಪ್ರಾಂಶುಪಾಲರಾದ ಡಾ. ರೇಚಣ್ಣ, ಕಛೇರಿ ಅಧೀಕ್ಷಕರಾದ ಶ್ರೀ ಶಿವಶಂಕರಪ್ಪ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಎ. ರಶ್ಮಿ, ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಹಾಗೂ ವಿದ್ಯಾರ್ಥಿನಿಯರು ಅಭಿನಂದಿಸಿದ್ದಾರೆ.

## ಮಾನವ ಆರೋಗ್ಯ ಮತ್ತು ಸಂಶೋಧನೆಯಲ್ಲಿ ಐಕೆಎಸ್ ಮತ್ತು ಎಐ

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ** ದಿನಾಂಕ 9.10.2025 ರಂದು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗವು "ಮಾನವ ಆರೋಗ್ಯ ಮತ್ತು ಸಂಶೋಧನೆಯಲ್ಲಿ ಐಕೆಎಸ್ ಮತ್ತು ಎಐ ಸಂಯೋಜನೆ: ನಿರೀಕ್ಷೆಗಳು ಮತ್ತು ಸಾಧ್ಯತೆಗಳು" ಎಂಬ ವಿಷಯ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಿತ್ತು.

ವಿಚಾರ ಸಂಕಿರಣವನ್ನು ಮೈಸೂರಿನ ಸಿಎಸ್‌ಆರ್–ಸಿಎಫ್‌ಟಿಆರ್‌ಐನ ಆಣ್ವಿಕ ಪೋಷಣೆ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಸಿ.ಜಿ. ಪೂರ್ಣಿಮಾ ಪ್ರಿಯದರ್ಶಿನಿ ಉದ್ಘಾಟಿಸಿ ಮಾತನಾಡಿ ಐಕೆಎಸ್‌ನ ವ್ಯಾಪ್ತಿ, ಪ್ರಸ್ತುತತೆ ಮತ್ತು ಮಾನವ ಆರೋಗ್ಯದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಎಐನ ಏಕೀಕರಣದ ಕುರಿತು ಮಾತನಾಡಿದರು. ಮಧುಮೇಹ ನಿರ್ವಹಣೆಗಾಗಿ ಸಿರಿಧಾನ್ಯಗಳಿಂದ ಜೈವಿಕ ಸಕ್ರಿಯ ಪೆಪ್ಟೈಡ್‌ಗಳ ಬಳಕೆಯನ್ನು ಅವರು ಉಲ್ಲೇಖಿಸಿದರು.

ಜೆಎಸ್‌ಎಸ್ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಐಕೆಎಸ್‌ನ ತತ್ವಗಳನ್ನು ಕಲಿಯುವ ಮತ್ತು ಅರ್ಥ ಮಾಡಿಕೊಳ್ಳುವ ಅಗತ್ಯವನ್ನು ಮತ್ತು ಉನ್ನತ ಶಿಕ್ಷಣದಲ್ಲಿ ಅದನ್ನು ಜಾರಿಗೆ ತರಲು ಭಾರತ ಸರ್ಕಾರ ಹೇಗೆ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎಂ ಪ್ರಭುರವರು, ಆರೋಗ್ಯ, ಶಿಕ್ಷಣದ ಪ್ರಾಮುಖ್ಯತೆ ಮತ್ತು ಮಾನವ ಜೀವನದ ಸುಧಾರಣೆಗೆ ಐಕೆಎಸ್ ಪ್ರಮುಖ ಕೊಡುಗೆ

ನೀಡುತ್ತದೆ. ಸದರಿ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುವಾಗ ಎಐನ ಋಣಾತ್ಮಕ ಪರಿಣಾಮಗಳ ಬಗ್ಗೆಯೂ ತಿಳಿದಿರಬೇಕೆಂದು ಹೇಳಿದರು.

ಜೀವರಸಾಯನಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಚೇತನ್ ಕುಮಾರ್ ಸ್ವಾಗತಿಸಿದರು. ಡಾ. ಎಂ.ಆರ್. ಸವಿತಾ ಪ್ರಶಾಂತ್ ವಂದಿಸಿದರು. ಎರಡನೇ ವರ್ಷದ ಎಂ.ಎಸ್‌ಸಿ. ಜೀವರಸಾಯನಶಾಸ್ತ್ರ ವಿಭಾಗದ ಕು. ಸಹನಾ ಮತ್ತು ಕು. ತೇಜಸ್ವಿನಿ ಭಟ್ ಪ್ರಾರ್ಥನೆ ನೆರವೇರಿಸಿದರು ಮತ್ತು ಕು. ವಿ.ಕೆ. ರಮ್ಯಾ ಕಾರ್ಯಕ್ರಮ ನಿರೂಪಿಸಿದರು. ಬೆಂಗಳೂರಿನ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದ ಡಾ. ಅಶ್ವಿನಿ ಶರ್ಮಾ ಮತ್ತು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸಾರ್ವಜನಿಕ ಆರೋಗ್ಯ ಶಾಲೆ, ಜೆಎಸ್‌ಎಸ್ ಎಎಚ್‌ಇಆರ್‌ನ ಡಾ. ಅನಿಲ್ ಎಸ್. ಬಿಳಿಮಲೆಯವರು ಉಪನ್ಯಾಸಗಳನ್ನು ನೀಡಿದರು. ಸುಮಾರು 100 ಮಂದಿ ಪ್ರತಿನಿಧಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

□

## ಇಂದು ಶಿಕ್ಷಣ ಆಯ್ಕೆಯಲ್ಲ ಅವಕಾಶವಾಗಿದೆ

"ಹಿಂದಿನ ಶಿಕ್ಷಣ ವ್ಯವಸ್ಥೆಗಿಂತ ಇಂದಿನ ಶಿಕ್ಷಣ ವ್ಯವಸ್ಥೆ ಕಾಲಕ್ಕೆ ತಕ್ಕಂತೆ ಬದಲಾಗಿದೆ. ಅಂದು ಅಭಿವೃದ್ಧಿ ಹೊಂದಿದ ದೇಶಗಳಿಂದ ಭಾರತದಲ್ಲಿ ಶಿಕ್ಷಣ ಪಡೆಯಲು ತಕ್ಷಶಿಲಾ, ನಳಂದಾ ವಿದ್ಯಾ ಕೇಂದ್ರಗಳಿಗೆ ಬರುತ್ತಿದ್ದರು. ಈ ಶಿಕ್ಷಣ ಕೇಂದ್ರಗಳಲ್ಲಿ ಬಹುಶಿಸ್ತೀಯ ಅಧ್ಯಯನಗಳು ನಡೆಯುತ್ತಿದ್ದವು. ಅಂದು ಶಿಕ್ಷಣದ ವ್ಯಾಖ್ಯಾನವೇ ಭಿನ್ನವಾಗಿತ್ತು. ಇಂದು ಆಧುನಿಕ ಭಾರತದಲ್ಲಿ ಶಿಕ್ಷಣ ಆಯ್ಕೆಯಲ್ಲ, ಅವಕಾಶವಾಗಿದೆ. ಇದನ್ನು ಬಳಸಿಕೊಂಡವರಿಗೆ ಮಾತ್ರ ಜ್ಞಾನದ ಲಾಭ ದೊರೆಯುತ್ತದೆ" ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾದ ಡಾ. ಎಸ್.ಆರ್. ನಿರಂಜನರವರು ಅಭಿಪ್ರಾಯಪಟ್ಟರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ** ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಡೆದ ಎರಡು ದಿನಗಳ 'ಅಭಿವಿನ್ಯಾಸ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಬದುಕಿನಲ್ಲಿ ಮಹತ್ವಪೂರ್ಣ ಗುರಿ ಇರಬೇಕು. ಯಾವ ರೀತಿಯ ಜ್ಞಾನ ಬೇಕೆಂಬ ಅರಿವು ಇರಬೇಕು. ಅವಶ್ಯಕವಾದ ಮತ್ತು ಅವಶ್ಯವಿಲ್ಲದ ಜ್ಞಾನ ಯಾವುದು ಎಂಬ ತಿಳುವಳಿಕೆ ಮತ್ತು ಸ್ವವಿಮರ್ಶಾ ಪ್ರಜ್ಞೆ ಇರಬೇಕು. ವಿದ್ಯಾರ್ಥಿಗಳ ಯಶಸ್ಸಿಗೆ ಇಂದು ಕೌಶಲ್ಯ ಆಧಾರಿತ ಶಿಕ್ಷಣ ಮತ್ತು ಬಹುಶಿಸ್ತೀಯ ನೆಲೆಯ ಜ್ಞಾನ ಅವಶ್ಯಕವಾಗಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕ್ಷೇತ್ರದ ಎಲ್ಲಾ ವಿಷಯಗಳು ಬಹು ಮುಖ್ಯ. ಇವುಗಳ ಅಂತರಶಿಸ್ತೀಯ ಅಧ್ಯಯನದ ಮಹತ್ವವನ್ನು ಅರಿಯಬೇಕು. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಗಳು ಮತ್ತು ಕೊರತೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಕೊರತೆಗಳನ್ನು ನಿವಾರಿಸಿಕೊಳ್ಳಬೇಕು. ಇವುಗಳೊಂದಿಗೆ ವಿದ್ಯಾರ್ಥಿಗಳಿಗೆ ಶಿಸ್ತು ಮತ್ತು ಉತ್ತಮ ವ್ಯಕ್ತಿತ್ವ ಬಹಳ ಮುಖ್ಯ. ವ್ಯಕ್ತಿತ್ವವನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ" ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು 'ದೀಕ್ಷಾರಂಭ' ಅಥವಾ 'ಅಭಿವಿನ್ಯಾಸ' ಕಾರ್ಯಕ್ರಮದ ಪರಿಕಲ್ಪನೆ ಮತ್ತು ಮಹತ್ವವನ್ನು ವಿವರಿಸುತ್ತಾ "ವಿದ್ಯಾರ್ಥಿಗಳು ಸ್ನಾತಕ ಪದವಿಯಿಂದ ಸ್ನಾತಕೋತ್ತರ ಪದವಿಯ ಅಧ್ಯಯನಕ್ಕೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ವಿವಿಧ ಆಲೋಚನೆ ಮತ್ತು ಕನಸುಗಳೊಂದಿಗೆ ಬಂದಿರುತ್ತಾರೆ. ಈ ಸಂದರ್ಭದಲ್ಲಿ ಕಾಲೇಜಿನ ಬಗ್ಗೆ, ಅವರ ಆಯ್ಕೆ ವಿಷಯಗಳು, ಪರೀಕ್ಷಾ ಪದ್ಧತಿ, ಕಾಲೇಜಿನ ನಿಯಮಗಳು ಮುಂತಾದ ಶೈಕ್ಷಣಿಕ ವಿಚಾರಗಳ ಬಗ್ಗೆ ಮಾಹಿತಿಯನ್ನು ನೀಡುವುದು ಪ್ರಮುಖವಾದ ಕಾರ್ಯ. ವಿದ್ಯಾರ್ಥಿಗಳು ಸಾಮಾಜೀಕರಣ, ಸಹವರ್ತಿಸುವುದು, ಆಡಳಿತವಾಗಿ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಡೆದ ಎರಡು ದಿನಗಳ 'ಅಭಿವಿನ್ಯಾಸ' ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾದ ಡಾ. ಎಸ್.ಆರ್. ನಿರಂಜನರವರು ಉದ್ಘಾಟಿಸುತ್ತಿರುವುದು.

ಮತ್ತು ಶೈಕ್ಷಣಿಕವಾಗಿ ಅನುಭವವನ್ನು ಪಡೆದುಕೊಳ್ಳುವುದು ಬಹು ಮುಖ್ಯ. ಈ ಹಿನ್ನೆಲೆಯಲ್ಲಿ ಈ ದೀಕ್ಷಾರಂಭ ಎಂಬ ಎರಡು ದಿನದ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದು ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವರ್ಷದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ತೊಡಗಿಸಿಕೊಳ್ಳಲು ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ಕಾಲೇಜಿನ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ಪೋಷಕರು ಮತ್ತು ಸಮಾಜದ ಆಶಯವನ್ನು ಸಾಕಾರಗೊಳಿಸಬೇಕು ಎಂದರು.

ವಿದ್ಯಾರ್ಥಿನಿ ಕು. ಧನುಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭು ಸ್ವಾಗತಿಸಿದರು. ಡಾ. ಎಚ್.ವಿ. ಕಾವ್ಯ ನಿರೂಪಿಸಿದರು. ಡಾ. ರಾಜೇಂದ್ರ ಪ್ರಸಾದ್ ವಂದಿಸಿದರು.

ಈ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಪ್ರೊ. ದೇವಣ್ಣ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಡಾ. ಎಂ. ಚೇತನ ಕುಮಾರ್, ಡಾ. ಎನ್. ರಾಜೇಂದ್ರ ಪ್ರಸಾದ್, ಡಾ. ಬಿ. ಪ್ರಭುಸ್ವಾಮಿ, ಡಾ. ಕುಮುದಿನಿ ಅಚ್ಚಿ, ಡಾ. ಜೆ. ಶಿವಾನಂದ ಮನೋಹರ್, ಶ್ರೀ ಶ್ರೀನಿವಾಸ, ಶ್ರೀ ಜಿ. ಕಾರ್ತಿಕ್, ಶ್ರೀ ಕೆ.ಸಿ. ಸುನೀಲ್ ಕುಮಾರ್, ಶ್ರೀ ಎಂ. ಕಾರ್ತಿಕ್, ಡಾ, ಎಚ್.ಎಸ್. ಕುಮಾರ್, ಡಾ. ಕೆ.ಎಂ. ಅನಿಲ್ ಕುಮಾರ್ ಮತ್ತು ಡಾ. ಬಿ. ಸುಷ್ಮಿತಾ ಇವರುಗಳು ವಿವಿಧ ವಿಷಯಗಳನ್ನು ಕುರಿತು ಮಾತನಾಡಿದರು. 15 ಸ್ನಾತಕೋತ್ತರ ವಿಭಾಗಗಳ ಪ್ರಥಮ ವರ್ಷದ 502 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸುತ್ತೂರು ಜಾತ್ರೆ

ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವನ್ನು 2026ರ ಜನವರಿ 15ರಿಂದ 20ರವರೆಗೆ (ಪುಷ್ಯ ಬಹುಳ ದ್ವಾದಶಿಯಿಂದ ಮಾಘ ಶುದ್ಧ ದ್ವಿತೀಯದವರೆಗೆ) ಆಚರಿಸಲು ದಿನಾಂಕ 13.11.2025ರಂದು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಂಚಾಲಕರುಗಳ ಸಭೆಯಲ್ಲಿ ತೀರ್ಮಾನಿಸಲಾಯಿತು. ಉಚಿತ ಸಾಮೂಹಿಕ ವಿವಾಹ, ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಆರೂ ದಿನಗಳು ನಡೆಯಲಿವೆ.

## ಜೆಎಸ್‌ಎಸ್ ಪದವಿ ಕಾಲೇಜಿನ ವಾಲಿಬಾಲ್ ತಂಡಕ್ಕೆ ಪ್ರಥಮ ಬಹುಮಾನ



**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಪದವಿ ವಿದ್ಯಾರ್ಥಿಗಳು ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣಾರ್ಥ ಜೆಎಸ್‌ಎಸ್ ಸಂಸ್ಥೆಯ ಪದವಿ ಅಂತರ ಕಾಲೇಜು ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯ ಪದವಿ ಕಾಲೇಜುಗಳ ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ಕು. ಜಿ.ಶಶಾಂಕ್ ಇವರ ನಾಯಕತ್ವದಲ್ಲಿ ವಾಲಿಬಾಲ್‌ನಲ್ಲಿ ಪ್ರಥಮ ಹಾಗೂ ಕು. ಡಿ.ವಿ. ಸಿಂಧು ಇವರ ನಾಯಕತ್ವದಲ್ಲಿ ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿರುತ್ತಾರೆ.

ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಶ್ರೀ ಎಂ. ಕಾರ್ತಿಕ್, ಶ್ರೀ ಸಿ.ಎಸ್. ನಿರಂಜನ್ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ದ್ವಿದಳಧಾನ್ಯಗಳ ಕೃಷಿ ತಾಂತ್ರಿಕತೆ ಹಾಗೂ ಮೌಲ್ಯವರ್ಧನೆ ತರಬೇತಿ

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ಕೃಷಿ ಇಲಾಖೆಯ ಸಹಯೋಗದೊಂದಿಗೆ ದಿನಾಂಕ 11.10.2025ರಂದು ದ್ವಿದಳ ಧಾನ್ಯಗಳ ಕೃಷಿ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧನೆ ಕುರಿತ ತರಬೇತಿ ಹಾಗೂ ಪಿಎಂ ಧನ-ಧಾನ್ಯ ಕೃಷಿ ಯೋಜನೆ ಮತ್ತು ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಕಾರ್ಯಕ್ರಮದ ನೇರಪ್ರಸಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ನಂಜನಗೂಡಿನ ಕೃಷಿ ಸಹಾಯಕ ನಿರ್ದೇಶಕರಾದ ಶ್ರೀ ರವಿ, ಬಿಲಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ, ಪ್ರಗತಿಪರ ರೈತರಾದ ಶ್ರೀಮತಿ ಶೈಲಜ, ಶ್ರೀ ರತ್ನಶೇಖರ್, ಶ್ರೀ ಎಸ್. ಶಾಂತಮೂರ್ತಿ ಹಾಗೂ ಕೆವಿಕೆಯ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು ನೆರವೇರಿಸಿದರು.



ನಂಜನಗೂಡಿನ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ರವಿಯವರು ನಂಜನಗೂಡು ಹಾಗೂ ಟಿ. ನರಸೀಪುರ ತಾಲ್ಲೂಕಿನಲ್ಲಿ ಏಕದಳ ಧಾನ್ಯ ಬೆಳೆಯಾದ ಬತ್ತವನ್ನು ಎರಡೂ ಹಂಗಾಮಿನಲ್ಲಿ ಬೆಳೆಯುತ್ತಿರುವುದರಿಂದ ದ್ವಿದಳ ಧಾನ್ಯಗಳ ಬೆಳೆಗಳ ಪ್ರಾಮುಖ್ಯತೆ ಕಡಿಮೆಯಾಗಿದೆ. ಮಳೆಯಾಶ್ರಿತ ಹಾಗೂ ಪಂಪ್‌ಸೆಟ್ ಲಭ್ಯತೆ ಇರುವ ಭೂಮಿಗಳಲ್ಲಿ ರೈತರು ಹೆಚ್ಚು ದ್ವಿದಳಧಾನ್ಯಗಳನ್ನು ಬೆಳೆಯಬೇಕು. ಅದರಿಂದ ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ. ದ್ವಿದಳ ಧಾನ್ಯಗಳಲ್ಲಿ ಪ್ರೋಟೀನ್ ಅಂಶ ಜಾಸ್ತಿಯಾಗಿರುವುದರಿಂದ ರೈತರು ತಮ್ಮ ಆಹಾರದಲ್ಲಿ ಅವುಗಳ ಬಳಕೆಯನ್ನು ಹೆಚ್ಚಾಗಿ ಉಪಯೋಗಿಸಬೇಕೆಂದು ತಿಳಿಸಿದರು.

ಮಂಡ್ಯದ ಕೃಷಿ ವಿಶ್ವವಿದ್ಯಾಲಯದ ಸಹ ಸಂಶೋಧಕ ನಿರ್ದೇಶಕರಾದ ಡಾ. ಪಿ. ಮಹದೇವುರವರು, ಇಂದಿನ ಕಾಲದಲ್ಲಿ ರೈತರು ಉದ್ಯಮಿಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿಕೊಂಡು ಉತ್ತಮ ಬೆಳೆ ಬೆಳೆಯುವುದರ ಜೊತೆಗೆ ಮಾರುಕಟ್ಟೆಯ ಅವಲಂಬನೆಯನ್ನು ತಿಳಿದುಕೊಂಡು ಮಾರಾಟ ಮಾಡಬೇಕು. ಅಲ್ಲದೇ, ತಾವು ಬೆಳೆದ ಬೆಳೆಯನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯಗಳಿಸಬಹುದೆಂದು ತಿಳಿಸಿದರು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಯೋಜನೆಯು ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಗುರಿಯನ್ನು ಕೇಂದ್ರ ಸರ್ಕಾರವು ಹೊಂದಿದೆ. ಈ ಮಿಷನ್ ಅನ್ನು 2025–26 ರಿಂದ 2030–31 ರವರೆಗೆ ಆರು ವರ್ಷಗಳ ಅವಧಿಯಲ್ಲಿ 11,440 ಕೋಟಿ ರೂ.ಗಳ ಆರ್ಥಿಕ ವೆಚ್ಚದಲ್ಲಿ ಕಾರ್ಯಗತಗೊಳಿಸಲು ಯೋಜಿಸಲಾಗಿದೆ. ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದು, ಆಮದು ಅವಲಂಬನೆಯನ್ನು ಕಡಿಮೆ ಮಾಡುವುದು, ರೈತರ ಆದಾಯವನ್ನು ಹೆಚ್ಚಿಸುವುದು ಮತ್ತು ಅಮೂಲ್ಯವಾದ ವಿದೇಶಿ ವಿನಿಮಯವನ್ನು ಉಳಿಸುವುದು ಈ ಕಾರ್ಯಾಚರಣೆಯ ಗುರಿಯಾಗಿದೆ. ರೈತರು ಹಂತ ಹಂತವಾಗಿ ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳಲು ಕಾರ್ಯಪ್ರವೃತ್ತರಾಗಬೇಕೆಂದು ಹೇಳಿದರು.

ಶ್ರೀಮತಿ ಎಚ್.ವಿ. ದಿವ್ಯಾರವರು ದ್ವಿದಳ ಧಾನ್ಯಗಳ

ಬೆಳೆಗಳ ಉತ್ತಮ ತಳಿಗಳ ಆಯ್ಕೆ, ಬೀಜೋಪಚಾರ ಹಾಗೂ ಕೃಷಿ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಿದರು. ಪ್ರಗತಿಪರ ರೈತರಾದ ಶ್ರೀ ರತ್ನ ಶೇಖರ್‌ರವರು, ಶ್ರೀ ಶಾಂತಮೂರ್ತಿಯವರು ಹಾಗೂ ಶ್ರೀಮತಿ ಶೈಲಜರವರು ಮಾತನಾಡಿದರು. ಡಾ. ಜಿ.ಎಂ. ವಿನಯ್‌ರವರು ಸ್ವಾಗತಿಸಿದರು. ಶ್ರೀ ಶ್ಯಾಮರಾಜ್ ವಂದಿಸಿದರು. ಡಾ. ವೈ.ಪಿ. ಪ್ರಸಾದ್‌ರವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ 250ಕ್ಕೂ ಹೆಚ್ಚು ರೈತ ಹಾಗೂ ರೈತ ಮಹಿಳೆಯರು ಮತ್ತು ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜಿನ 89 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

□

## ಜೆಎಸ್‌ಎಸ್ ಸಂಸ್ಥೆಗಳು, ತಾಳವಾಡಿ

**ತಾಳವಾಡಿಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ** ಆಶ್ರಯದಲ್ಲಿ 19.10.2025ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಚಾಮರಾಜನಗರ ವೀರಶೈವ–ಲಿಂಗಾಯತ ಮಹಾಸಭಾದ ಅಧ್ಯಕ್ಷರಾದ ಶ್ರೀ ಮೂಡ್ಲುಪುರ ನಂದೀಶ್ ಮಾತನಾಡಿ ರಾಜೇಂದ್ರ ಶ್ರೀಗಳವರು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆ ಅಪಾರವಾದುದು. ಪ್ರಸ್ತುತ ಸುತ್ತೂರು ಶ್ರೀಗಳು ತಾಳವಾಡಿ ಭಾಗದಲ್ಲಿ 'ಬಸವ ಭವನ" ನಿರ್ಮಾಣ ಕಾರ್ಯಕ್ಕೆ ಅಡಿಗಲ್ಲಿಟ್ಟು ಅದಕ್ಕೆ ಬೇಕಾದ ಆರ್ಥಿಕ ಸಹಾಯವನ್ನು ಮಠದ ವತಿಯಿಂದ ಮತ್ತು ಕರ್ನಾಟಕ ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿ ಕಟ್ಟಡ ನಿರ್ಮಾಣಕ್ಕೆ ಸಹಾಯ ಮಾಡಿ ಈ ಭಾಗದ ಜನರ ಆರಾಧ್ಯ ದೈವವಾಗಿದ್ದಾರೆಂದರು.

ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿಯವರು, ಪರಮಪೂಜ್ಯ ಶ್ರೀಗಳು ವ್ಯಕ್ತಿಯಲ್ಲ ಅವರು ಒಂದು ದೈವಶಕ್ತಿ. ಕರ್ನಾಟಕ ರಾಜ್ಯವಲ್ಲದೇ, ಬೇರೆ ರಾಜ್ಯ ಹಾಗೂ ವಿದೇಶಗಳಲ್ಲೂ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹಲವಾರು ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಬಡ ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪವಾಗಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪನೆ ಮಾಡಿ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆಂದರು.

ಉದ್ಯಮಿ ಶ್ರೀ ಪಿ. ವೃಷಭೇಂದ್ರಪ್ಪನವರು, ಡಾ. ರಾಜೇಂದ್ರ ಶ್ರೀಗಳಿಗೆ ತಾಳವಾಡಿ ಭಾಗದ ಜನರ ಮೇಲೆ ತುಂಬಾ ಪ್ರೀತಿಯಿತ್ತು. ಪ್ರಸ್ತುತ ಜಗದ್ಗುರುಗಳು ಸಹ ಚಾಮರಾಜನಗರ ಭಾಗದ ಕೆರೆಗಳಿಗೆ ನೀರು ತುಂಬಿಸಲು ಅವಿರತ ಪ್ರಯತ್ನ ಮಾಡಿ ಈ ಭಾಗದ ರೈತರಿಗೆ ದೈವ ಸ್ವರೂಪವಾಗಿದ್ದಾರೆ ಎಂದರು.

ಮುಡಿಗುಂಡದ ಶ್ರೀ ಶ್ರೀಕಂಠ ಸ್ವಾಮಿಗಳು ಮಾತನಾಡಿ, ಡಾ. ರಾಜೇಂದ್ರ ಶ್ರೀಗಳವರು ಸ್ಥಾಪಿಸಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರುವ ಅನೇಕ ವಿದ್ಯಾರ್ಥಿಗಳು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ಶ್ರೀಗಳ ಭಕ್ತರಾಗಿದ್ದಾರೆ. ಪ್ರಸ್ತುತ ಶ್ರೀಗಳು ಅನೇಕ ಮಠಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಐಟಿಐ ಮತ್ತು ಮೆಟ್ರಿಕ್ಯುಲೇಷನ್ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ತಾಳವಾಡಿ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ವೀರಭದ್ರಸ್ವಾಮಿಯವರು ಮಾತನಾಡಿದರು. ಪ್ರಾಂಶುಪಾಲರುಗಳಾದ ಶ್ರೀ ಎಂ.

ಶಿವಕುಮಾರಸ್ವಾಮಿಯವರು ಮತ್ತು ಶ್ರೀ ಮಂಜುನಾಥ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಜೆಎಸ್‌ಎಸ್ ಮೆಟ್ರಿಕ್ಯುಲೇಷನ್ ಶಾಲೆಯ ಶಿಕ್ಷಕಿಯರು ಪ್ರಾರ್ಥನೆ ಸಲ್ಲಿಸಿದರು. ಕಿರಿಯ ತರಬೇತಿ ಅಧಿಕಾರಿಯಾದ ಶ್ರೀ ಜಗದೀಶರವರು ಎಲ್ಲರನ್ನೂ ಸ್ವಾಗತಿಸಿದರು. ಶಿಕ್ಷಕರಾದ ಶ್ರೀಮತಿ ಪ್ರತಿಭಾರವರು ವಂದನಾರ್ಪಣೆ ಮಾಡಿದರು. ಶಿಕ್ಷಕಿ ಶ್ರೀಮತಿ ಮಮತಾಮಣಿಯವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ತಾಳವಾಡಿ ಭಾಗದ ಸುತ್ತಮುತ್ತಲಿನ ಗ್ರಾಮಗಳ ಜನರು ಭಾಗವಹಿಸಿದ್ದರು.

## ಲೋಕಕಲ್ಯಾಣಕ್ಕಾಗಿ ಸೇವೆ ಸಲ್ಲಿಸಿದ ರಾಜೇಂದ್ರ ಶ್ರೀಗಳು

"ರಾಜೇಂದ್ರ ಶ್ರೀಗಳು ಲೋಕಕಲ್ಯಾಣಕ್ಕಾಗಿ ಅಪಾರ ಸೇವೆ ಸಲ್ಲಿಸಿದವರು" ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಗುಂಡ್ಲುಪೇಟೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲ್ಲೂಕು ಹಾಗೂ ಯುವ ಘಟಕ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 8.10.2025 ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ರಾಜೇಂದ್ರ ಶ್ರೀಗಳು ತಮ್ಮ ಇಡೀ ಬದುಕನ್ನು ಸಮಾಜಕ್ಕಾಗಿ ಮುಡಿಪಾಗಿಟ್ಟವರು. ತಾವು ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಅವಕಾಶವಿದ್ದರೂ ಸಮಾಜದ ಉದ್ಧಾರಕ್ಕಾಗಿ, ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶಿಕ್ಷಣಕ್ಕಾಗಿ ಆ ಅವಕಾಶವನ್ನು ತ್ಯಾಗ ಮಾಡಿದರು. ಲೌಕಿಕ ಮತ್ತು ಪಾರಮಾರ್ಥಿಕ ಸಾಧನೆಯನ್ನು ಒಟ್ಟಾಗಿ ಸಮತೂಕದಲ್ಲಿ ನಡೆಸಿಕೊಂಡು ಹೋದವರು. ದೈಹಿಕ ಆರೋಗ್ಯದ ಸಮಸ್ಯೆಗಳ ನಡುವೆಯೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಶ್ರೀಗಳವರು ಮಾತೃ ಹೃದಯಿಗಳು. ಪ್ರಸಾದನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಆಪ್ತವಾಗಿ ನಡೆದುಕೊಳ್ಳುತ್ತಿದ್ದರು. ಅವರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದರು. ತಾವು ಮಾಡುತ್ತಿದ್ದ ಸಾಮಾಜಿಕ ಕಾರ್ಯಗಳಲ್ಲೇ ಸಂತೋಷ ಪಡೆಯುತ್ತಿದ್ದರು. ಉದ್ಯೋಗಕ್ಕೆ ಪೂರಕವಾದ ಶಿಕ್ಷಣವನ್ನು ಪಡೆದರೆ ವಿದ್ಯಾರ್ಥಿಗಳು ತಮ್ಮ ಬದುಕನ್ನು ಉಜ್ವಲವಾಗಿ ರೂಪಿಸಿಕೊಳ್ಳಬಹುದು. ಪ್ರತಿಭೆಯ ವಿಕಾಸಕ್ಕೆ ಅವಕಾಶವನ್ನು ಕೊಟ್ಟಾಗ ಮಾತ್ರ ಮನುಷ್ಯ ಸಾಧನೆಯ ಶಿಖರವನ್ನು ಏರಲು ಸಾಧ್ಯ. ಇಂತಹ ಅವಕಾಶವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ನೀಡುತ್ತಲೇ ಬಂದಿದೆ ಎಂದು ತಿಳಿಸಿದರು.

ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್‌ರವರು ಶಿಕ್ಷಣ ಇಂದು ಜೀವನ ರೂಪಿಸುವುದಕ್ಕೆ ಅತ್ಯಗತ್ಯವಾಗಿದೆ. ಜೆಎಸ್‌ಎಸ್ ಸಂಸ್ಥೆಯು ಪ್ರಾಥಮಿಕದಿಂದ ಉನ್ನತ ಪದವಿಯವರೆಗೆ ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ನೀಡಿ ದೇಶ ವಿದೇಶಗಳಲ್ಲಿ ಉದ್ಯೋಗವನ್ನು ಪಡೆದುಕೊಳ್ಳಲು ನೆರವಾಗಿದೆ. ಸಮಾಜಮುಖಿಯಾಗಿ ಆಲೋಚಿಸಿದ ರಾಜೇಂದ್ರ ಶ್ರೀಗಳು ತಮ್ಮ ಬದುಕನ್ನು ಬಡಮಕ್ಕಳ ಉದ್ಧಾರಕ್ಕಾಗಿ ಮುಡುಪಿಟ್ಟವರು. ಸುತ್ತೂರು ಶ್ರೀಮಠದ ದಿವ್ಯ ಗುರುಪರಂಪರೆ ನಾಡಿಗೆ ಸಂಸ್ಕಾರ ನೀಡುವ ಮೂಲಕ ಸಮಾಜಕ್ಕೆ ಶ್ರೇಷ್ಠ ಮಾರ್ಗದರ್ಶನ ಮಾಡುತ್ತಾ ಬಂದಿದೆ. ನಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕಾದರೆ ಪೂಜ್ಯರು ಹಾಕಿಕೊಟ್ಟ ಆದರ್ಶದ ದಾರಿಯಲ್ಲಿ ನಡೆಯಬೇಕು. ಶ್ರೀಗಳವರು ಸಮಾಜಕ್ಕೆ ಕೊಟ್ಟ ಅಭೂತಪೂರ್ವ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಪೂಜ್ಯ ರಾಜೇಂದ್ರ ಶ್ರೀಗಳವರು ಸದಾ

ಸ್ಮರಣೀಯರು, ಪ್ರಸ್ತುತ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಹ ನಮಗೆ ಸದಾ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ.ಎನ್ ನಂದೀಶ್ ಹಂಚೆರವರು ನುಡಿನಮನ ಸಲ್ಲಿಸಿದರು. ಗುಂಡ್ಲುಪೇಟೆ ಪುರಸಭೆ ಅಧ್ಯಕ್ಷರಾದ ಶ್ರೀ ಶಶಿಧರ, ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ರವಿ ಕಮರಹಳ್ಳಿಯವರು ಮಾತನಾಡಿದರು.

ಅಂದು ಬೆಳಗ್ಗೆ ಶ್ರೀಗಳವರ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿ ವಿವಿಧ ಕಲಾತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ತಾಲ್ಲೂಕಿನ ಭಕ್ತವೃಂದ, ಸಂಸ್ಥೆಯ ನೌಕರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ತರಗತಿಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದತ್ತಿ ಪುರಸ್ಕಾರ ಹಾಗೂ ನಗದು ಬಹುಮಾನ ವಿತರಿಸಲಾಯಿತು. ರಾಜೇಂದ್ರ ಶ್ರೀಗಳವರ 110ನೇ ಜಯಂತಿಯ ಸ್ಮರಣಾರ್ಥ ಆಯೋಜಿಸಿದ್ದ ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

ಕು. ಸ್ನೇಹ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಪಿ. ಮಹದೇವಮ್ಮ ಸ್ವಾಗತಿಸಿದರು. ಶ್ರೀ ಹೆಚ್.ಪಿ. ಪಶುಪತಿ ವಂದಿಸಿದರು. ಶ್ರೀ ಹೆಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ನಿರೂಪಿಸಿದರು.

## ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟ್ ಲೋಕಾರ್ಪಣೆ

ನೂತನ ಸಂಬಂಧಗಳನ್ನು ಬೆಸೆಯಲು ಆಯ್ಕೆಗಳಿಗೆ ಅವಕಾಶ ಕಲ್ಪಿಸಲು ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟನ್ನು ಸಿದ್ಧಪಡಿಸಲಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ** ದಿನಾಂಕ 17.10.2025ರಂದು ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟನ್ನು ಅನಾವರಣಗೊಳಿಸಿ ಪೂಜ್ಯರು ಆಶೀರ್ವಚನ ನೀಡಿದರು. ಜೆಎಸ್‌ಎಸ್ ವಿವಾಹವೇದಿಕೆ ಮೂವತ್ತು ವರ್ಷಗಳಿಂದ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರು, ಬೆಂಗಳೂರುಗಳಲ್ಲಿ ವಧೂವರರ ಸಮಾವೇಶಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಚಾಮರಾಜನಗರದಲ್ಲಿಯೂ ಸದ್ಯದಲ್ಲಿಯೇ ಇದಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ವಿವಾಹದ ಆಯ್ಕೆಯ ವಿಧಾನಗಳು ಕಾಲಮಾನಕ್ಕೆ ತಕ್ಕಂತೆ ಬದಲಾಗುತ್ತಿರುತ್ತವೆ. ಇಂದಿನ ದಿನಮಾನದಲ್ಲಿ ಸಮಾನಮನಸ್ಕರು ಮತ್ತು ಸಮಾನ ಆಲೋಚನೆಗಳನ್ನು ಹೊಂದಿರುವವರನ್ನು ಸಂಗಾತಿಗಳಾಗಿ ಪಡೆಯಲು ಇಚ್ಛಿಸುತ್ತಾರೆ. ಬದಲಾದ ಕಾಲಘಟ್ಟದಲ್ಲಿ ಆನ್‌ಲೈನ್ ವಿವಾಹ ವೇದಿಕೆಯಲ್ಲಿ ಜಾಲತಾಣಗಳ ಸಹಾಯದೊಂದಿಗೆ ವಿವಾಹಗಳು ನಿಶ್ಚಯಗೊಳ್ಳುತ್ತಿವೆ. ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್‌ನಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಎಲ್ಲ ತರಹದ ಅವಕಾಶಗಳನ್ನು ನೀಡಲಾಗಿದೆ. ಈ ವೆಬ್‌ಸೈಟನ್ನು ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಭಾಷೆಗಳಿಗೂ ಸಹ ಅಳವಡಿಸಿ ಗ್ರಾಮಾಂತರ ಪ್ರದೇಶಗಳಿಗೂ ತಲುಪುವಂತೆ ಮಾಡಲು ಸೂಚಿಸಿದೆ ಎಂದು ಹೇಳಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು, ಮೊದಲೆಲ್ಲ ಸಾಂಪ್ರದಾಯಿಕವಾಗಿ ಜೀವನ ಸಂಗಾತಿಗಳನ್ನು

ಆಯ್ಕೆಮಾಡಿಕೊಳ್ಳಲಾಗುತ್ತಿತ್ತು. ಈಗ ತಂತ್ರಜ್ಞಾನದ ಆವಿಷ್ಕಾರದಿಂದ ಅದು ಬದಲಾಗಿದೆ. ಆನ್‌ಲೈನ್ ವಿವಾಹ ಜಾಲತಾಣಗಳ ಮೂಲಕ ಮದುವೆಗಳು ಏರ್ಪಡುತ್ತಿವೆ. ನವೀಕೃತ ವೆಬ್‌ಸೈಟ್ ಇಂದಿನ ದಿನಮಾನಕ್ಕೆ ಅವಶ್ಯವಿರುವ ಎಲ್ಲ ಆಯ್ಕೆ ಮತ್ತು ವಿಷಯಗಳನ್ನು ಒಳಗೊಂಡಿದೆ. ಅವಶ್ಯಕತೆಯಿರುವ ಎಲ್ಲರೂ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪನವರು, ಜೀವನದಲ್ಲಿ ವಿವಾಹವೆಂಬುದು ಪ್ರಮುಖ ಘಟ್ಟ. ಲಿಂಗಾನುಪಾತದಲ್ಲಿ ವ್ಯತ್ಯಾಸವಿರುವುದರಿಂದ ಸರಿಯಾದ ವಯಸ್ಸಿಗೆ ವಿವಾಹಗಳು ಏರ್ಪಡುತ್ತಿಲ್ಲ. ಇಂತಹ ವೆಬ್‌ಸೈಟ್‌ಗಳಿಂದ ವಿವಾಹಗಳು ನಿಶ್ಚಯವಾಗಲು ಸಹಾಯಕವಾಗಲಿದೆ. ವಿವಾಹವಾಗಲು ಕಾಯುತ್ತಿರುವವರಿಗೆ ಇದರಿಂದ ಸಾಕಷ್ಟು ನೆರವಾಗಲಿದೆ ಎಂದು ಹೇಳಿದರು.

ಎಸ್‌ಜೆಸಿಇ ಸ್ಟೆಪ್‌ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸಿ. ಶಿವಶಂಕರ್‌ರವರು ವೆಬ್‌ಸೈಟ್‌ನ ಬಗ್ಗೆ ಮಾಹಿತಿ ನೀಡಿ ಸಂಸ್ಕೃತಿಯೊಂದಿಗೆ ತಂತ್ರಜ್ಞಾನವನ್ನು ಸಮ್ಮಿಳಿತಗೊಳಿಸಿ ವಿವಾಹವೇದಿಕೆಯ ವೆಬ್‌ಸೈಟನ್ನು ನವೀಕೃತಗೊಳಿಸಲಾಗಿದೆ. ಜಗತ್ತಿನ ಎಲ್ಲ ಭಾಗಗಳಲ್ಲೂ ಇದರ ಉಪಯೋಗ ಪಡೆದು, ವಿವಾಹವಾಗಬಯಸುವವರು ನೋಂದಾಯಿಸಿಕೊಳ್ಳಬಹುದಾಗಿದೆ. ವೈಯಕ್ತಿಕ ಮಾಹಿತಿಗಳು ಸೋರಿಕೆಯಾಗದಂತೆ ಎಚ್ಚರಿಕೆಯಿಂದ ಇರುವಂತೆ ರೂಪಿಸಲಾಗಿದೆ. ಜೀವನಸಂಗಾತಿಗಳನ್ನು ಪಡೆಯಲು ಬಯಸುವವರಿಗೆ ಎಲ್ಲ ರೀತಿಯ ಆಯ್ಕೆಗಳನ್ನು ಅಳವಡಿಸಿ ಸುಲಭಗೊಳಿಸಲಾಗಿದೆ. ಸ್ಟೆಪ್‌ನ ಸ್ಟಾರ್ಟ್‌ಅಪ್ ಮೂಲಕ ಇದನ್ನು ನವೀಕೃತಗೊಳಿಸಲಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು, ಆರೋಗ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಉಪಸ್ಥಿತರಿದ್ದರು. ಶ್ರೀ ಎಸ್. ಶಿವಕುಮಾರಸ್ವಾಮಿಯವರು ಸ್ವಾಗತಿಸಿದರು. ವಿವಾಹವೇದಿಕೆಯ ಸ್ವಯಂಸೇವಕಿ ಶ್ರೀಮತಿ ಎನ್. ಮಲ್ಲಿಕಾರವರು ಮಾತನಾಡಿದರು. ಕು. ವೈಶಾಲಿ ಮತ್ತು ಕು. ಕುಶಲಾ ಪ್ರಾರ್ಥಿಸಿದರು. ಶ್ರೀಮತಿ ಪಲ್ಲವಿಯವರು ಕಾರ್ಯಕ್ರಮ ನಿರೂಪಿಸಿದರು.

ಆಸಕ್ತಿಯುಳ್ಳವರು ನವೀಕೃತ ವೆಬ್‌ಸೈಟ್ https://jssmatrimony.com/login ವಿಳಾಸದಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

---

## ರಾಜೇಂದ್ರ ಶ್ರೀಗಳು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದ ಸೇತುವೆ

ರಾಜೇಂದ್ರ ಶ್ರೀಗಳು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದ ಸೇತುವೆಯಾಗಿ ಸೇವೆ ಸಲ್ಲಿಸಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ನಂಜನಗೂಡಿನ ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳು,** ವಿವಿಧ ಸಂಘಸಂಸ್ಥೆಗಳು ಹಾಗೂ ನಾಗರಿಕರ ಸಹಯೋಗದೊಂದಿಗೆ ದಿನಾಂಕ 23.10.2025ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ಭಾರತವು ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕವಾಗಿ ಶ್ರೀಮಂತ ಇತಿಹಾಸವನ್ನು ಹೊಂದಿರುವ ಕಾರಣಕ್ಕೆ ಜಗತ್ತಿನ ಮುಂದುವರೆದ ದೇಶಗಳೂ ಕೂಡ ನಮ್ಮತ್ತ ತಿರುಗಿ ನೋಡುವಂತಾಗಿದೆ. ಇಲ್ಲಿನ ಸಂತರು, ಋಷಿಮುನಿಗಳು ಅಧ್ಯಾತ್ಮ, ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ರಂಗಗಳಿಗೆ ತಪಶ್ಶಕ್ತಿಯನ್ನು ಧಾರೆಯೆರೆದು ಸೇವೆ ಸಲ್ಲಿಸಿದ್ದಾರೆ. ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರು ಕಷ್ಟದ ದಿನಗಳಲ್ಲೂ ಪ್ರಸಾದ ನಿಲಯಗಳನ್ನು ಮುನ್ನಡೆಸಿ ಅನ್ನದಾಸೋಹ, ಅಕ್ಷರದಾಸೋಹ ಹಾಗೂ ಆರೋಗ್ಯದಾಸೋಹ ಕ್ಷೇತ್ರಗಳಲ್ಲಿ ಶ್ರೀಮಠದ ಸೇವಾಕಾರ್ಯವನ್ನು ವಿಸ್ತರಿಸಿದ್ದಾರೆ ಎಂದರು.

ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್‌ರವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 12ನೆಯ ಶತಮಾನದ ಜಗಜ್ಯೋತಿ ಬಸವೇಶ್ವರರ ಕಾಯಕತತ್ವದ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅನ್ನ, ಅಕ್ಷರ, ಆರೋಗ್ಯ ದಾಸೋಹದ ಮೂಲಕ ಜನರಿಗೆ ನಿಸ್ವಾರ್ಥ ಸೇವೆ ಒದಗಿಸಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಪೂಜ್ಯರ ಆಶಯದಂತೆ ಇಂದಿನ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸುತ್ತೂರು ಶ್ರೀಕ್ಷೇತ್ರದ ಸೇವಾ ಕಾರ್ಯವನ್ನು ರಾಜ್ಯ, ದೇಶ ಹಾಗೂ ವಿದೇಶಗಳಿಗೆ ವಿಸ್ತರಿಸಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರಗತಿಪರ ರೈತರಾದ ಶ್ರೀ ಜಿ. ಮಂಜೇಶ್‌ಕುಮಾರ್‌ರವರನ್ನು ಸನ್ಮಾನಿಸಲಾಯಿತು. ಜೆಎಸ್‌ಎಸ್ ಪಾಲಿಟಕ್ನಿಕ್‌ನ 'ನವ್ಯ 2025' ವಾರ್ಷಿಕ ಸಂಚಿಕೆ ಹಾಗೂ ಅನುರಾಗ್ ಮಕ್ಕಳ ಮನೆಯ ಸಂಸ್ಥಾಪಕ ಶ್ರಿ ಡಿ.ಜಿ. ಸೋಮಶೇಖರಮೂರ್ತಿಯವರ 'ಶರಣ ಭಾರತ' ದ್ವೈಮಾಸಿಕ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಮಾಜಿ ಶಾಸಕರುಗಳಾದ ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಬಿ. ಹರ್ಷವರ್ಧನ್ ಮಾತನಾಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ ಸೋಮಶೇಖರ್‌ರವರು ನುಡಿನಮನ ಸಲ್ಲಿಸಿದರು. ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಜಶಿರಾ ಹವ್ಯಾಸಿ ಭಜನಾ ಸಂಘದವರು ಪ್ರಾರ್ಥಿಸಿದರು. ಡಾ. ಸಿ.ಎಸ್. ಹೊನ್ನೇಗೌಡ ಸ್ವಾಗತಿಸಿದರು. ಶ್ರೀ ಎಸ್.ಎಂ. ಕೆಂಪಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ.ವಿ. ನಾಗೇಶ್ ವಂದಿಸಿದರು. ಶ್ರೀಮತಿ ಎಂ.ಎನ್. ಜಯಶೀಲ ಕಾರ್ಯಕ್ರಮ ನಿರೂಪಿಸಿದರು.

ಬೆಳಗ್ಗೆ ಜೆಎಸ್‌ಎಸ್ ಕಾಲೇಜು ಆವರಣದಿಂದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪುತ್ಥಳಿಯ ಬೆಳ್ಳಿರಥದ ಮೆರವಣಿಗೆಯು ನಾನಾ ಜನಪದ ಕಲಾ ತಂಡಗಳೊಂದಿಗೆ ರಾಷ್ಟ್ರಪತಿ ರಸ್ತೆಯ ಮೂಲಕ ಸಾಗಿ ಜೆಎಸ್‌ಎಸ್ ಮಂಗಳ ಮಂಟಪವನ್ನು ತಲುಪಿತು.

## ಭಾಷೆಗೆ ವ್ಯಾಕರಣಶುದ್ಧಿ ಮುಖ್ಯ

"ಯಾವುದೇ ಭಾಷೆಗಾದರೂ ವ್ಯಾಕರಣಶುದ್ಧಿ ಬಹಳ ಮುಖ್ಯ" ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 17.10.2025 ರಂದು ಆಯೋಜಿಸಿದ್ದ ಸಂಸ್ಕೃತೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ಸಂಸ್ಕೃತ ಭಾಷೆ ಜಗತ್ತಿನ ಅನೇಕ ಭಾಷೆಗಳಿಗೆ ಮಾತೃಸ್ಥಾನವನ್ನು ಹೊಂದಿದೆ. ಅದನ್ನು ಭಾಷೆಯಾಗಿ ಕಲಿತರೆ ಸುಲಭ, ಕಲಿಯದಿದ್ದರೆ ಕಠಿಣ. ಪ್ರತಿಯೊಬ್ಬರೂ ವ್ಯಾಕರಣಶುದ್ಧವಾಗಿ ಮಾತನಾಡುವುದನ್ನು ಆಸಕ್ತಿಯಿಂದ ಕಲಿಯಬೇಕು. ವಿದ್ಯಾರ್ಥಿಗಳು ಕೇಶಿರಾಜನ ಶಬ್ದಮಣಿದರ್ಪಣ ಕೃತಿಯನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಇವು ಸಹಾಯಕವಾಗಲಿವೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವಿ. ಗಿರೀಶ್‌ಚಂದ್ರರವರು, ಸಂಸ್ಕೃತ ಭಾಷೆಗೆ ಪ್ರಾಚೀನ ಪರಂಪರೆಯಿದ್ದು, ಅದು ಎಲ್ಲಾ ಮೌಲ್ಯಗಳ ಮಹಾನಿಧಿಯಾಗಿದೆ. ಮನುಷ್ಯನ ಮನಸ್ಸನ್ನು ಸಂಸ್ಕಾರಗೊಳಿಸುವಲ್ಲಿ ಇಂಥ ಉತ್ಸವಗಳು ಸಹಕಾರಿಯಾಗಲಿವೆ ಎಂದರು.

ವಿದ್ವಾಂಸರಾದ ಡಾ ಎಚ್.ವಿ. ನಾಗರಾಜರಾವ್‌ರವರು ಸಂಸ್ಕೃತವು ಹಲವಾರು ಭಾಷೆಗಳ ಸಾಹಿತ್ಯಕೃತಿಗಳಿಗೆ ಗುರುತರ ಕೊಡುಗೆ ನೀಡಿದೆ. ಈ ಭಾಷೆಯನ್ನು ಕಲಿಯಲು ಸತತವಾದ ಪ್ರಯತ್ನವಿದ್ದರೆ ಮಾತ್ರ ಸಾಧ್ಯ. ಭಾಷೆ ಕಲಿಯುವಾಗ ಭಯಪಡದೆ ದೃಢ ವಿಶ್ವಾಸ ಮತ್ತು ಶ್ರದ್ಧೆಯಿಂದ ಅಧ್ಯಯನ

ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ ವಿದ್ವಾಂಸರುಗಳಾದ ಡಾ ಎಚ್.ವಿ. ನಾಗರಾಜರಾವ್, ಪ್ರೊ. ಮಲ್ಲಣ್ಣ, ಡಾ. ಕೆ.ಜಿ. ಪುಟ್ಟಹೊನ್ನಯ್ಯರವರುಗಳನ್ನು ಸನ್ಮಾನಿಸಲಾಯಿತು. ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡಿದರು. ಕರಾಟೆಯಲ್ಲಿ ಸಾಧನೆ ಮಾಡಿರುವ ಕಾಲೇಜಿನ ಅಂತಿಮ ಬಿಬಿಎ ವಿದ್ಯಾರ್ಥಿನಿ ಕು. ಆರ್. ಪ್ರಕೃತಿ ಗೌಡರವರನ್ನು ಅಭಿನಂದಿಸಲಾಯಿತು. ಸಂಸ್ಕೃತೋತ್ಸವದಲ್ಲಿ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ "ನಾರೀಶಕ್ತಿ" ಎಂಬ ನಾಟಕ ಪ್ರದರ್ಶನಗೊಂಡಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿ ವರ್ಗದವರು, ಪ್ರಾಂಶುಪಾಲರಾದ ಡಾ. ರೇಚಣ್ಣ ಉಪಸ್ಥಿತರಿದ್ದರು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಕೃತ ಶಿಕ್ಷಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳ ವೇದಘೋಷದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಡಾ. ಬಿ.ಪಿ. ಷಡಕ್ಷರಿ ಸ್ವಾಗತಿಸಿದರು. ಡಾ. ಕೃಷ್ಣ ಭಟ್ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು.

## ರಾಜೇಂದ್ರ ಶ್ರೀಗಳಿಗೆ ಚಾಮರಾಜನಗರದೊಂದಿಗೆ ಅವಿನಾಭಾವ ಸಂಬಂಧವಿತ್ತು

"ಪೂಜ್ಯ ರಾಜೇಂದ್ರ ಶ್ರೀಗಳು ಚಾಮರಾಜನಗರ ಜಿಲ್ಲೆಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು" ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಚಾಮರಾಜನಗರದಲ್ಲಿ ದಿನಾಂಕ 28.10.2025 ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ರಾಜೇಂದ್ರ ಶ್ರೀಗಳು ಬಹಳ ವರ್ಷಗಳ ಹಿಂದೆಯೇ ಚಾಮರಾಜನಗರದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಇಲ್ಲಿ ವ್ಯಾಸಂಗ ಮಾಡಿದ ಅನೇಕ ಮಂದಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಶ್ರೀಗಳು ಇಲ್ಲಿನ ವಿದ್ಯಾರ್ಥಿನಿಲಯಕ್ಕೆ ಭೇಟಿ ಕೊಟ್ಟು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುತ್ತಿದ್ದರು. ವಿದ್ಯಾರ್ಥಿನಿಲಯಗಳು ಪ್ರಾರಂಭವಾದಾಗ ಭಕ್ತಾದಿಗಳು, ಸಾರ್ವಜನಿಕರು ಉದಾರವಾಗಿ ಕೊಡುಗೆ ಕೊಟ್ಟಿದ್ದನ್ನು ಪೂಜ್ಯರು ಯಾವಾಗಲೂ ಸ್ಮರಿಸುತ್ತಿದ್ದರು. ಜ್ಞಾನಸಂಪಾದನೆ ಮಾಡುವಾಗ ಮನಸ್ಸನ್ನು ಕೇಂದ್ರೀಕರಿಸಿ ಸದಾ ಜಾಗೃತವಾಗಿರುವ ಸಂಕಲ್ಪ ಮಾಡಿದರೆ ಏಳಿಗೆ ಸಾಧ್ಯ. ಜ್ಞಾನವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂಬ ಮಾತಿದೆ. ಮನುಷ್ಯ ಜ್ಞಾನವನ್ನು ಸಂಪಾದಿಸಿದರೆ ಲೋಕಪೂಜ್ಯನಾಗಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಅಧ್ಯಯನದ ಕಡೆಗೆ ಹೆಚ್ಚಿನ ಗಮನ ಕೊಟ್ಟು ಸುಶಿಕ್ಷಿತರಾಗಿ, ಸುಸಂಸ್ಕೃತರಾಗಿ ಜೀವನವನ್ನು ರೂಪಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಕರೆ ನೀಡಿದರು.

ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡಿ, ದೇಶ ವಿದೇಶಗಳಲ್ಲಿ ಶೈಕ್ಷಣಿಕವಾಗಿ ಪ್ರಭಾವ ಬೀರಿರುವ ಸುತ್ತೂರು ಮಠಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಐತಿಹಾಸಿಕವಾಗಿ ಹತ್ತನೆಯ ಶತಮಾನದಲ್ಲಿ ಸ್ಥಾಪನೆಯಾದ ಶ್ರೀಮಠದ ಕೊಡುಗೆ ಅಪಾರವಾದದ್ದು. ಪೂಜ್ಯರಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 23ನೆಯ ಪೀಠಾಧಿಪತಿಗಳಾಗಿ ಮಠದ ಏಳಿಗೆಗೆ ಶ್ರಮಿಸಿದರು. ಮಾರ್ಗದರ್ಶಕರಾಗಿ ಮಠದ ಬೆಳವಣಿಗೆಯ ಮೂಲಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಪೂಜ್ಯರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು

ಪರಿಣಾಮಕಾರಿಯಾದ ಬದಲಾವಣೆಗಳನ್ನು ತಂದು ಮಠದ ಶ್ರೇಯಸ್ಸಿಗೆ ಶ್ರಮಿಸುತ್ತಿದ್ದಾರೆ. ಶಿಕ್ಷಣ ಒಂದು ದೊಡ್ಡ ತಪಸ್ಸಿದ್ದಂತೆ, ಮಠಮಾನ್ಯಗಳಿಂದ ಧಾರ್ಮಿಕ ಸಂದೇಶ ಮತ್ತು ಜಾಗೃತಿ ಮೂಡಿಸುವ ಶೈಕ್ಷಣಿಕ ಬೆಳವಣಿಗೆ ಸಾಧ್ಯವಾಗಿದೆ. ಚಾಮರಾಜನಗರದಂತಹ ಪ್ರದೇಶದಲ್ಲಿ ಶಿಕ್ಷಣ ಕ್ರಾಂತಿಯನ್ನು ಉಂಟು ಮಾಡಿದ್ದಾರೆ. ಒಟ್ಟಾರೆ 300ಕ್ಕೂ ಹೆಚ್ಚು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಮಹಾವಿದ್ಯಾಪೀಠದ ಮೂಲಕ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತಿನಂತೆ ಕೆಲಸವೇ ಪೂಜೆ ಮತ್ತು ನಿಸ್ವಾರ್ಥ ಸೇವೆಯೇ ಭಗವಂತನ ಸೇವೆ ಎಂದು ಭಾವಿಸಿದವರು ಪೂಜ್ಯರು ಎಂದು ಹೇಳಿದರು.

ಖ್ಯಾತ ಸಾಹಿತಿ ಪ್ರೊ. ಎಂ. ಕೃಷ್ಣೇಗೌಡರು ನುಡಿನಮನ ಸಲ್ಲಿಸಿದರು. ಸಂಸದರಾದ ಶ್ರೀ ಸುನಿಲ್ ಬೋಸ್, ಶಾಸಕರು ಹಾಗೂ ಎಂಎಸ್‌ಐಎಲ್ ಅಧ್ಯಕ್ಷರಾದ ಶ್ರೀ ಸಿ. ಪುಟ್ಟರಂಗಶೆಟ್ಟಿ, ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿಯವರು ಮಾತನಾಡಿದರು. ಶ್ರೀ ಮಹಮ್ಮದ್ ಅಸ್ಗರ್, ಶ್ರೀ ಎಚ್.ವಿ. ಚಂದ್ರು, ಶ್ರೀ ಎಂ. ನಂಜುಂಡಸ್ವಾಮಿ, ಶ್ರೀ ಎಸ್. ಸುರೇಶ್, ಶ್ರೀಮತಿ ಕುಮುದ ಕೇಶವಮೂರ್ತಿ ಉಪಸ್ಥಿತರಿದ್ದರು.

ಶ್ರೀಮತಿ ಬಿ.ಪಿ. ಸೌಮ್ಯ ಮತ್ತು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಎನ್. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಗಿರೀಶ್ ವಂದಿಸಿದರು. ಶ್ರೀಮತಿ ಅರುಣಶ್ರೀ ಕಾರ್ಯಕ್ರಮ ನಿರೂಪಿಸಿದರು ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳ ಅಧಿಕಾರಿಗಳು, ಮುಖ್ಯಸ್ಥರುಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು, ಭಕ್ತವೃಂದ ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಳಗ್ಗೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಹರವೆ, ಮರಿಯಾಲ, ಚಾಮರಾಜನಗರ, ಮುಡುಗೂರು ಹಾಗೂ ಕಬ್ಬಹಳ್ಳಿ ಮಠಗಳ ಶ್ರೀಗಳು ಉತ್ಸವಕ್ಕೆ ಚಾಲನೆ ನೀಡಿದರು. ನಂದಿಕಂಬ, ಮಂಗಳವಾದ್ಯ, ವೀರಗಾಸೆ, ಬ್ಯಾಂಡ್ ಸೆಟ್, ನಗಾರಿ, ಗೊರವರ ಕುಣಿತ ಹಾಗೂ ಡೊಳ್ಳು ಕುಣಿತ ತಂಡಗಳೊಂದಿಗೆ ಚಾಮರಾಜೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟು ಜೋಡಿರಸ್ತೆಯ ಮೂಲಕ ಸಾಗಿ ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳ ಆವರಣವನ್ನು ತಲುಪಿತು.

---

## ಕನ್ನಡ ರಾಜ್ಯೋತ್ಸವ ಪುರಸ್ಕಾರ



ಜೆಎಸ್‌ಎಸ್ ಸಂಗೀತ ಸಭಾದ ಸದಸ್ಯರಾದ ಪ್ರೊ. ಕೆ. ರಾಮಮೂರ್ತಿರಾವ್ ಅವರಿಗೆ ನೃತ್ಯಕ್ಷೇತ್ರದಿಂದ 2025ರ ಕನ್ನಡ ರಾಜ್ಯೋತ್ಸವ ಪುರಸ್ಕಾರ ಲಭಿಸಿದೆ.

## ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ



ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ಶ್ರೀ ನಗರ್ಲೆ ಶಿವಕುಮಾರ ಅವರಿಗೆ ಸಾಹಿತ್ಯ ಕ್ಷೇತ್ರದಿಂದ 2025ರ ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ ಲಭಿಸಿದೆ.

## ಆರ್ಥಿಕ ಯೋಜನೆಯು ಸಮೃದ್ಧ ಭವಿಷ್ಯಕ್ಕೆ ಮಾರ್ಗಸೂಚಿ



"ಆರ್ಥಿಕ ಯೋಜನೆಯ ಪರಿವರ್ತಕ ಶಕ್ತಿಯನ್ನು ಗುರುತಿಸಿ, ಆರ್ಥಿಕ ಯೋಜನೆಯು ಸಮೃದ್ಧ ಭವಿಷ್ಯಕ್ಕೆ ಮಾರ್ಗಸೂಚಿಯಾಗಿದೆ" ಎಂದು ಪಾಂಡವಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಟಿ.ಆರ್. ತ್ರಿನೇಶ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ದಿನಾಂಕ 27.10.2025ರಂದು ನಡೆದ ಆರ್ಥಿಕ ಸಾಕ್ಷರತೆಯ ಕುರಿತಾದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ಆರ್ಥಿಕ ನಿರ್ವಹಣೆಯು ಕೇವಲ ಉಳಿತಾಯದ ಬಗ್ಗೆ ಯೋಚಿಸುವಂಥದ್ದಲ್ಲ. ದೀರ್ಘಕಾಲೀನ ಆರ್ಥಿಕ ಸ್ಥಿರತೆಯನ್ನು ಒದಗಿಸಲು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಉತ್ತಮ ಸುರಕ್ಷಿತ ಹೂಡಿಕೆಗಾಗಿ ಪ್ರಾಯೋಗಿಕ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಅಪಾಯ ಮತ್ತು ಆದಾಯದ ಸಮತೋಲನವನ್ನು ಅರ್ಥಮಾಡಿಕೊಳ್ಳಬೇಕು. ಜೊತೆಗೆ ಆತುರದ ಖರ್ಚುಗಳ ತೊಡಕುಗಳು ಮತ್ತು ಅನಿರೀಕ್ಷಿತ ಸವಾಲುಗಳನ್ನು ಎದುರಿಸಲು ತುರ್ತು ನಿಧಿಯ ಅವಶ್ಯಕತೆ ಇದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಚಾರ್ಟರ್ಡ್ ಅಕೌಂಟೆಂಟ್ ಮತ್ತು ದೆಹಲಿಯ ಎಸ್‌ಇಬಿಐ ನೋಂದಾಯಿತ ಸ್ಮಾರ್ಟ್ಸ್ ತರಬೇತುದಾರರಾದ ಶ್ರೀಮತಿ ನೀತು ಲೋಹಿಯಾರವರು ಮ್ಯೂಚುವಲ್ ಫಂಡ್‌ಗಳ ಬಗ್ಗೆ ಸಮಗ್ರ ಅವಲೋಕನವನ್ನು ನೀಡಿದರು. ಮ್ಯೂಚುವಲ್ ಫಂಡ್‌ಗಳ ಎರಡು ಪ್ರಮುಖ ವಿಭಾಗಗಳಾದ ಓಪನ್-ಎಂಡೆಂಡ್ ಮತ್ತು ಕ್ಲೋಸ್ ಎಂಡೆಂಡ್ ಯೋಜನೆಗಳ ಬಗ್ಗೆ ವಿವರಿಸುತ್ತಾ, ಓಪನ್-ಎಂಡೆಂಡ್ ಯೋಜನೆಗಳು ಹೂಡಿಕೆದಾರರಿಗೆ ಯಾವುದೇ ಸಮಯದಲ್ಲಿ ಯೂನಿಟ್‌ಗಳನ್ನು ಖರೀದಿಸಲು ಅಥವಾ ಮಾರಲು ಅನುವು ಮಾಡಿಕೊಡುತ್ತವೆ. ಇದು ಸೌಲಭ್ಯ ಮತ್ತು ದ್ರವ್ಯತೆಯನ್ನು ಒದಗಿಸುತ್ತದೆ. ಆದರೆ ಕ್ಲೋಸ್ ಎಂಡೆಂಡ್ ಯೋಜನೆಗಳು ನಿಗದಿತ ಅವಧಿಯನ್ನು ಹೊಂದಿರುತ್ತವೆ. ಜೊತೆಗೆ ಸೀಮಿತ ಅವಕಾಶಗಳನ್ನು ಒದಗಿಸುತ್ತವೆ. ಇದು ದೀರ್ಘಕಾಲೀನ ಹೂಡಿಕೆ ಗುರಿಗಳನ್ನು ಹೊಂದಿರುವವರಿಗೆ ಆಕರ್ಷಕವಾಗಿರುತ್ತದೆ. ಮ್ಯೂಚುವಲ್ ಫಂಡ್‌ಗಳು ಹೂಡಿಕೆಗಳನ್ನು ವೈವಿಧ್ಯಗೊಳಿಸಲು ಮತ್ತು ಅಪಾಯವನ್ನು ತಗ್ಗಿಸಲು ಇರುವ ಉತ್ತಮ ಮಾರ್ಗವಾಗಿದೆ. ಆದರೆ ಅವುಗಳ ರಚನೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಮತ್ತು ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ವಿ. ಗಂಗಾಧರಸ್ವಾಮಿ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕು. ನಿಖಿತಾ ಭಟ್ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಐಶ್ವರ್ಯ ಶಿವಾನಂದ್ ಸ್ವಾಗತಿಸಿದರು. ಕು. ಹರ್ಷಿತಾ ವಂದಿಸಿದರು. ಕು. ಕವನ ಕಾರ್ಯಕ್ರಮ ನಿರೂಪಿಸಿದರು.

## ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ವಾರ್ಷಿಕ ಉಪನ್ಯಾಸ



**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ** ಅಕಾಡೆಮಿಕ್ ಸೊಸೈಟಿಯ ವತಿಯಿಂದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ವಾರ್ಷಿಕ ಉಪನ್ಯಾಸದ ಅಂಗವಾಗಿ "ಭಾರತದ ತೀವ್ರ ನಿಗಾ ಘಟಕಗಳಲ್ಲಿ ಕಿಡ್ನಿ ವೈಫಲ್ಯದ ಬದಲಾದ ಸನ್ನಿವೇಶಗಳು" ಎಂಬ ವಿಷಯ ಕುರಿತು ಉಪನ್ಯಾಸವನ್ನು ಆಯೋಜಿಸಿತ್ತು.

ಹೈದರಾಬಾದ್‌ನ ಯಶೋದ ಆಸ್ಪತ್ರೆಯ ಮೂತ್ರಪಿಂಡ ಮತ್ತು ಕಿಡ್ನಿ ಕಸಿ ಸೇವೆಗಳ ನಿರ್ದೇಶಕರು ಮತ್ತು ಮುಖ್ಯಸ್ಥರಾದ ಡಾ. ಎಂ. ರಾಜಶೇಖರ್ ಚಕ್ರವರ್ತಿಯವರು, ತೀವ್ರವಾದ ಕಿಡ್ನಿ ವೈಫಲ್ಯವು ಭಾರತದಲ್ಲಿ ಪ್ರಮುಖ ಆರೋಗ್ಯ ಸಮಸ್ಯೆಯಾಗಿದೆ. ವಿಶೇಷವಾಗಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳಲ್ಲಿ, ಸಾಮಾನ್ಯವಾಗಿ ತೀವ್ರ ನಿಗಾ ಘಟಕದ ರೋಗಿಗಳಲ್ಲಿ ಕಿಡ್ನಿ ವೈಫಲ್ಯದ ಪ್ರಮಾಣ ಹೆಚ್ಚಿದೆ. ಕಿಡ್ನಿ ವೈಫಲ್ಯವು ಅನಾರೋಗ್ಯದ ತೀವ್ರತೆಯನ್ನು ಸೂಚಿಸುತ್ತದೆ. ಚಿಕಿತ್ಸೆಯ ಸನ್ನಿವೇಶಗಳು ಮತ್ತು ಬದಲಾವಣೆಗಳು, ವೈದ್ಯಕೀಯ ಪ್ರಗತಿಗಳು, ಲಭ್ಯವಿರುವ ತಂತ್ರಜ್ಞಾನಗಳು, ಮತ್ತು ರೋಗಿಗಳ ನಿರ್ವಹಣೆಯ ಮೇಲೆ ಅವಲಂಬಿತವಾಗಿವೆ. ಮೂತ್ರಪಿಂಡ ವೈಫಲ್ಯವನ್ನು ನಿರ್ವಹಿಸಲು ಸುಧಾರಿತ ರೋಗನಿರ್ಣಯ ಮತ್ತು ಚಿಕಿತ್ಸಾ ವಿಧಾನಗಳು ಲಭ್ಯವಿವೆ. ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ಸಂವಹನ ಮತ್ತು ಸಮಾಲೋಚನೆ ನಡೆಸುವುದು ಉತ್ತಮ ಎಂದು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧು, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ನಾರಾಯಣಪ್ಪ, ಉಪ ಪ್ರಾಂಶುಪಾಲರುಗಳಾದ ಡಾ. ಮಾಂತಪ್ಪ, ಡಾ. ಪ್ರವೀಣ್ ಕುಲಕರ್ಣಿ, ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ವೈ.ಎಸ್. ರವಿಕುಮಾರ್, ಇಂಡಿಯನ್ ಸೊಸೈಟಿ ಆಫ್ ಕ್ರಿಟಿಕಲ್ ಕೇರ್ ಮೆಡಿಸಿನ್ ಮೈಸೂರು ವಿಭಾಗದ ಅಧ್ಯಕ್ಷರಾದ ಡಾ. ವೈದ್ಯನಾಥನ್, ಜೆಎಸ್‌ಎಸ್ ಅಕಾಡೆಮಿಕ್ ಸೊಸೈಟಿಯ ಅಧ್ಯಕ್ಷರಾದ ಡಾ. ಮಂಜುನಾಥ ಶೆಟ್ಟಿ, ಕಾರ್ಯದರ್ಶಿಗಳಾದ ಡಾ. ಪಿ. ಅಶೋಕ್ ಮತ್ತು ಡಾ. ಅಕ್ಷಯ್ ಉಪಸ್ಥಿತರಿದ್ದರು.

# ಆಧುನಿಕ ಆವಿಷ್ಕಾರಗಳಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ ಅಪಾರ




ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆಯ ಅನ್ವಯಗಳು' ಕುರಿತ ಕಾರ್ಯಾಗಾರವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸಿ ಮಾತನಾಡುತ್ತಿರುವುದು.

"ಜಗತ್ತಿಗೆ ಆಧುನಿಕ ಆವಿಷ್ಕಾರಗಳನ್ನು ನೀಡುವಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ ಅಪಾರ" ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಅಭಿಪ್ರಾಯಪಟ್ಟರು.

**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ** ನವಜ್ಯೋತಿ ಸಭಾಂಗಣದಲ್ಲಿ ಗಣಕ ವಿಜ್ಞಾನ ವಿಭಾಗದ ವತಿಯಿಂದ ದಿನಾಂಕ 25.10.2025ರಂದು ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆಯ ಅನ್ವಯಗಳು' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಪ್ರಸ್ತುತ ಶತಮಾನದಲ್ಲಿ ವೇಗವಾಗಿ ಬೆಳೆಯುತ್ತಿರುವ ಕೃತಕ ಬುದ್ಧಿಮತ್ತೆಯು ಆಧುನಿಕ ಆವಿಷ್ಕಾರಗಳನ್ನು ಮುನ್ನಡೆಸುತ್ತಿದೆ. ಎಐ ಸಾಮರ್ಥ್ಯಗಳ ಜೊತೆಗೆ ಅಪಾಯಗಳನ್ನೂ ಒಡ್ಡುತ್ತದೆ ಹಾಗೂ ನಾವು ಹೊಸ ಹೊಸ ಸವಾಲನ್ನು ಎದುರಿಸಬೇಕಿದೆ. ಇಂದಿನ ಎಐ ಬಳಕೆದಾರರು ಸೂಕ್ತವಾದ ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಬೆಂಗಳೂರಿನ ವರ್ಲ್ಡ್ ಟ್ರೇಡ್ ಸೆಂಟರ್‌ನ ಸ್ಯಾಂಸಂಗ್ ಎಲೆಕ್ಟ್ರೋ–ಮೆಕಾನಿಕ್ ಕಂ. ಪ್ರೈ. ಲಿಮಿಟೆಡ್‌ನ ಪ್ರಧಾನ ಇಂಜಿನಿಯರ್ ಡಾ. ಎಸ್. ಮಂಜುನಾಥ್ ಮಾತನಾಡಿ, ಎಐ ಈಗ ಕೇವಲ ತಂತ್ರಜ್ಞಾನವಾಗಿರದೆ, ಒಂದು ಹೊಸ ಸಾಮರ್ಥ್ಯವಾಗಿದೆ. ಜೊತೆಗೆ ಎಐ ಬಳಸುವ ಸಾಮರ್ಥ್ಯ ಹೊಂದಿರುವವರು ಮಾತ್ರ ಯಶಸ್ವಿಯಾಗಬಲ್ಲರು. ಎಐ ಹೊಸ ಅವಕಾಶಗಳ ಬಾಗಿಲನ್ನು ತೆರೆದಿದೆ. ಪರಿವರ್ತನಾತ್ಮಕ ಬದಲಾವಣೆಗೆ ಎಲ್ಲರೂ ಹೊಂದಿಕೊಳ್ಳಬೇಕೆಂದು ಹೇಳಿದರು.

ಮೈಸೂರು ವಿಶ್ವವಿದ್ಯಾಲಯದ ಗಣಕವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು ಮಾತನಾಡಿ, ಎಐಯನ್ನು ಜೈವಿಕ ತಂತ್ರಜ್ಞಾನ ಮತ್ತು ನ್ಯಾನೋ ತಂತ್ರಜ್ಞಾನದೊಂದಿಗೆ ಸಂಯೋಜಿಸುವ ಬಗ್ಗೆ ಒತ್ತು ನೀಡಬೇಕು. ಎಐ ನಮಗೆ ಲಭ್ಯವಿರುವ ದೊಡ್ಡ ಪ್ರಮಾಣದ ಡೇಟಾವನ್ನು ಸಮರ್ಥವಾಗಿ

ಬಳಸಿಕೊಳ್ಳಲು ಸಹಾಯ ಮಾಡುತ್ತದೆ. ಜೊತೆಗೆ ಎಐ ನಮ್ಮನ್ನು ಬದಲಿಸಲು ಬಂದಿಲ್ಲ. ಬದಲಿಗೆ ನಮ್ಮ ಸಾಮರ್ಥ್ಯಗಳನ್ನು ವೃದ್ಧಿಗೊಳಿಸಲು ಬಂದಿದೆ ಎಂಬುದನ್ನು ತಿಳಿಯಬೇಕು ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಮತ್ತು ಐಕ್ಯೂಎಸಿ ಸಂಯೋಜಕರೂ ಮತ್ತು ಗಣಕವಿಜ್ಞಾನ ವಿಭಾಗದ ಮುಖ್ಯಸ್ಥರೂ ಆದ ಶ್ರೀ ಎಚ್.ಜಿ. ಪ್ರದೀಪ್‌ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೂರು ತಾಂತ್ರಿಕ ಗೋಷ್ಠಿಗಳು ನಡೆದವು. ಅಧ್ಯಾಪಕರು ಹಾಗೂ ಸಂಶೋಧಕರು 20 ಪ್ರಬಂಧಗಳನ್ನು ಮಂಡಿಸಿದರು. ಮೊದಲನೆಯ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರು "ರಿಯಲ್ ಟೈಮ್‌ನಲ್ಲಿ ಕೃತಕ ಬುದ್ಧಿಮತ್ತೆ: ಅವಕಾಶಗಳು ಮತ್ತು ಸವಾಲುಗಳು" ಎಂಬ ವಿಷಯ ಕುರಿತಂತೆ ಮಾತನಾಡಿದರು. ಎರಡನೆಯ ತಾಂತ್ರಿಕ ಗೋಷ್ಠಿಯಲ್ಲಿ ಬೆಂಗಳೂರಿನ ವರ್ಲ್ಡ್ ಟ್ರೇಡ್ ಸೆಂಟರ್‌ನ ಸ್ಯಾಮ್‌ಸಂಗ್ ಎಲೆಕ್ಟ್ರೋ–ಮೆಕ್ಯಾನಿಕ್ಸ್ ಕಂ. ಲಿಮಿಟೆಡ್‌ನ ಮುಖ್ಯ ಇಂಜಿನಿಯರ್ ಡಾ. ಎಸ್. ಮಂಜುನಾಥ್ "ಭಾಷಾ ಸಂಸ್ಕರಣೆಯಾಗಿ ಕೃತಕ ಬುದ್ಧಿಮತ್ತೆ" ವಿಷಯವಾಗಿ ಮಾತನಾಡಿದರು. ಕೊನೆಯ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರಿನ ಆಶಯ ಡಿಸೈನ್ಸ್ ಅಂಡ್ ಸಲ್ಯೂಷನ್ಸ್‌ನ ಹಿರಿಯ ಡೇಟಾ ವಿಜ್ಞಾನಿ ಡಾ. ಅನಿತಾ ರಾಘವೇಂದ್ರರವರು "ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಯ ಅನ್ವಯ" ಎಂಬ ವಿಷಯ ಕುರಿತಂತೆ ಮಾತನಾಡಿದರು.

ಕು. ಕೀರ್ತನಾ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಪಿ.ಎಸ್. ಸಹನಾ ಸ್ವಾಗತಿಸಿದರು. ಸಹಾಯಕ ಶ್ರೀಮತಿ ನಂದಿನಿ ಆರ್.ವಿ. ವಂದಿಸಿದರು. ಕು. ಎಸ್.ಡಿ. ರಕ್ಷಿತಾ ಕಾರ್ಯಕ್ರಮ ನಿರೂಪಿಸಿದರು.

---

## ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ಪೆಕ್ಟ್ರೋಸ್ಕೋಪಿಯ ನಿರ್ಣಾಯಕ ಪಾತ್ರ



**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ರಸಾಯನಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 24.10.2025ರಂದು 'ಸ್ಪೆಕ್ಟ್ರೋಸ್ಕೋಪಿಕ್ ವಿಧಾನಗಳಿಂದ ಸಂಯುಕ್ತಗಳ ಗುಣಲಕ್ಷಣ' ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಮೈಸೂರಿನ

ಶಾರದಾ ವಿಲಾಸ ಕಾಲೇಜಿನ ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಎ. ದಿಲೀಪ್‌ಕುಮಾರ್‌ರವರು ಉದ್ಘಾಟಿಸಿ ಮಾತನಾಡುತ್ತಾ, ಸ್ಪೆಕ್ಟ್ರೋಸ್ಕೋಪಿಯು ವೈಜ್ಞಾನಿಕ ಸಂಶೋಧನೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ನಮ್ಮ ಹಿಂದಿನ ವಿಧಾನಗಳಿಗೆ ಹೋಲಿಸಿದರೆ, ಸ್ಪೆಕ್ಟ್ರೋಸ್ಕೋಪಿ ಬಳಕೆಯು ಸಂಯುಕ್ತಗಳನ್ನು ಮತ್ತು ಅವುಗಳ ರಚನೆಗಳನ್ನು ಗುರುತಿಸಲು, ವಿಶೇಷವಾಗಿ ಔಷಧ, ವಸ್ತು ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಡಿ.ಎಂ. ಲೋಕೇಶ್ವರಿ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕು. ಅನಘ ಮತ್ತು ಕು. ದಿಶಾ ಪ್ರಾರ್ಥಿಸಿದರು. ಕು. ಎಸ್. ಅಪರಂಜಿ ಸ್ವಾಗತಿಸಿದರು. ಕು. ಎನ್. ಸಂಗೀತಾ ವಂದಿಸಿದರು. ಕು. ಎಸ್. ಗೌತಮಿ ಕಾರ್ಯಕ್ರಮವನ್ನು ನಿರೂಪಿಸಿದರು.

## ಕ್ರೀಡಾ ಸಾಧಕಿಗೆ ಸನ್ಮಾನ



**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಅಂತಿಮ ಬಿಬಿಎ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಪ್ರಕೃತಿ ಆರ್. ಗೌಡ ಕರಾಟೆಯಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ, ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರಿಗೆ ಪರಮಪೂಜ್ಯ ಜಗದ್ಗುರುಗಳವರು ಕಾಲೇಜಿನಲ್ಲಿ ನಡೆದ ಸಂಸ್ಕೃತೋತ್ಸವದಲ್ಲಿ ಸನ್ಮಾನಿಸಿ ಆಶೀರ್ವದಿಸಿದರು.

ಇವರು 2025ರ ಆಗಸ್ಟ್ ತಿಂಗಳಿನಲ್ಲಿ ಶಿವಮೊಗ್ಗದಲ್ಲಿ ನಡೆದ 6ನೇ ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್‌ನ (ಶ್ರೀಲಂಕಾ, ನೇಪಾಳ, ಯುಎಸ್‌ಎ ಇತ್ಯಾದಿ) ಕತಾ ಮತ್ತು ಕುಮಿತೆ ವಿಭಾಗಗಳಲ್ಲಿ ಪ್ರಥಮ ಸ್ಥಾನ ಹಾಗೂ ಗುಂಪು ಕುಮಿತೆ ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಜೊತೆಗೆ "ಸಮಗ್ರ ಚಾಂಪಿಯನ್‌ಶಿಪ್" ಪ್ರಶಸ್ತಿ ಪಡೆದುಕೊಂಡಿದ್ದಾರೆ. ವಿಶ್ವ ಕರಾಟೆ ಸ್ಪರ್ಧೆಯ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಲು ಅರ್ಹತೆಯನ್ನು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ.

2025ರ ಫೆಬ್ರವರಿ ತಿಂಗಳಿನಲ್ಲಿ ಹಂಪಿಯು ವಿಜಯನಗರದಲ್ಲಿ ನಡೆದ 2ನೇ ರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಕರಾಟೆಯ ಕತಾ ಮತ್ತು ಕುಮಿತೆ (ಬ್ಲ್ಯಾಕ್ ಬೆಲ್ಟ್) ವಿಭಾಗಗಳಲ್ಲಿ ಪ್ರಥಮ ಸ್ಥಾನ ಹಾಗೂ "ಸಮಗ್ರ ಚಾಂಪಿಯನ್‌ಶಿಪ್" ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. 2024 ರ ಆಗಸ್ಟ್ ತಿಂಗಳಿನಲ್ಲಿ ಶಿವಮೊಗ್ಗದಲ್ಲಿ ನಡೆದ 5ನೇ ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ (ಶ್ರೀಲಂಕಾ, ನೇಪಾಳ, ಯು.ಎಸ್.ಎ, ಮಲೇಷಿಯ, ಇತ್ಯಾದಿ) ಕರಾಟೆಯ ಕತಾ ಮತ್ತು ಕುಮಿತೆ (ಬ್ಲ್ಯಾಕ್ ಬೆಲ್ಟ್) ವಿಭಾಗಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರುತ್ತಾರೆ. 2024ರ ಜನವರಿ ತಿಂಗಳನಲ್ಲಿ ಶಿವಮೊಗ್ಗದಲ್ಲಿ ನಡೆದ ಗಣರಾಜ್ಯೋತ್ಸವ ಕಪ್ ಹಾಗೂ ಜಿಲ್ಲಾ ಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಕತಾ ಮತ್ತು ಕುಮಿತೆ (ಬ್ಲ್ಯಾಕ್ ಬೆಲ್ಟ್) ವಿಭಾಗಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸುವುದರ ಜೊತೆಗೆ "ಮಿಸ್ ಕರಾಟೆ ಆಫ್ ಶಿವಮೊಗ್ಗ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. 2024 ನವೆಂಬರ್ ತಿಂಗಳಿನಲ್ಲಿ ಭದ್ರಾವತಿ ತಾಲ್ಲೂಕು ಆಡಳಿತ ವಿಭಾಗವು 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಇವರಿಗೆ "ತಾಲ್ಲೂಕು ಕನ್ನಡ ರಾಜ್ಯೋತ್ಸವ ಪ್ರಶಸ್ತಿ" ನೀಡಿ ಗೌರವಿಸಿದೆ. 2023ರ ಆಗಸ್ಟ್ ತಿಂಗಳಿನಲ್ಲಿ ಶಿವಮೊಗ್ಗದಲ್ಲಿ ನಡೆದ 4ನೇ ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ (ಶ್ರೀಲಂಕಾ, ನೇಪಾಳ ಇತ್ಯಾದಿ) ಕರಾಟೆಯ ಕತಾ ಮತ್ತು ಕುಮಿತೆ (ಬ್ಲ್ಯಾಕ್ ಬೆಲ್ಟ್) ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಇಂತಹ ಅಪರೂಪದ ಸಾಧಕಿ ಕು. ಪ್ರಕೃತಿ ಆರ್. ಗೌಡರವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಮಹಿಳಾ ಕಾಲೇಜು ನಿರಂತರವಾಗಿ ಪ್ರೋತ್ಸಾಹಿಸುತ್ತಾ ಬಂದಿದೆ.

## ಮೈಸೂರು ಜಿಲ್ಲೆ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ



**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಸಮಾಜಕಾರ್ಯ ವಿಭಾಗ, ಸರ್ಕಾರೇತರ ಸಂಸ್ಥೆಗಳಾದ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಮತ್ತು ಜೆ ಕರ್ನಾಟಕ ಸ್ಟೇಟ್ ಯೂತ್ ನೆಟ್‌ವರ್ಕ್ ಸಹಯೋಗದೊಂದಿಗೆ ದಿನಾಂಕ 24.10.2025ರಂದು

"ಮೈಸೂರು ಜಿಲ್ಲೆಯ ಪರಿಸರ ಸಂರಕ್ಷರಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ" ಕುರಿತು ಸಮಾಲೋಚನಾ ಸಭೆಯನ್ನು ನಡೆಸಲಾಯಿತು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ ಈ ಸಭೆಯ ಆಯೋಜನೆಯು ಗೌರವದ ಹಾಗೂ ಹೆಮ್ಮೆಯ ಕ್ಷಣವಾಗಿದ್ದು, ಇಂಥ ಕಾರ್ಯಕ್ರಮಗಳು ನಮ್ಮೆಲ್ಲರ ಪರಿಸರ ಸಂರಕ್ಷಣೆಯ ಬದ್ಧತೆಯನ್ನು ಪ್ರತಿನಿಧಿಸುತ್ತವೆ. ಇಂತಹ ಚಟುವಟಿಕೆಗಳು ಜನರ ಮತ್ತು ಸರ್ಕಾರದ ಸಂಯುಕ್ತ ಸಹಕಾರದಿಂದ ಮಾತ್ರ ಯಶಸ್ವಿಯಾಗಬಹುದು. ಶುದ್ಧ ಜಲ, ಶುದ್ಧ ಶಕ್ತಿ, ಜವಾಬ್ದಾರಿಯುತ ಉಪಭೋಗ ಮತ್ತು ಸಹಯೋಗ ಹಾಗೂ ಪರಿಸರ ಸಮತೋಲನ ಭೂಮಿಯ ಜೀವಜಗತ್ತು ಮತ್ತು ಹವಾಮಾನ ಕ್ರಿಯೆ– ಈ ಆರು ಅಭಿವೃದ್ಧಿ ಗುರಿಗಳು ಸತತ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗೆ ಅತ್ಯಂತ ಮುಖ್ಯವಾದವು. ಮೈಸೂರಿನಲ್ಲಿ ನವೀಕರಿಸಿದ ಶಕ್ತಿಯ ಬಳಕೆ 63% ರಷ್ಟಾಗಿರುವುದು ರಾಜ್ಯದ ಪರಿಸರ ಸ್ನೇಹಿ ಅಭಿವೃದ್ಧಿಯ ಒಂದು ಉತ್ತಮ ಉದಾಹರಣೆ. ಸೌರ ಪ್ಯಾನಲ್ ಮೇಲ್ಛಾವಣಿ ಅಳವಡಿಕೆ ಮೂಲಕ ವಿದ್ಯುತ್ ಉಳಿತಾಯ ಹಾಗೂ ಶುದ್ಧ ಶಕ್ತಿಯ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ. ನಾವೆಲ್ಲರೂ ಒಟ್ಟಾಗಿ ಶುದ್ಧ, ಹಸಿರು ಮತ್ತು ಆರೋಗ್ಯಕರ ಪರಿಸರ ನಿರ್ಮಾಣದತ್ತ ಹೆಜ್ಜೆ ಇಡಬೇಕು. ನಾಗರಿಕರು, ವಿದ್ಯಾರ್ಥಿಗಳು, ಸಂಸ್ಥೆಗಳು ಹಾಗೂ ಸರ್ಕಾರದ ಎಲ್ಲಾ ಇಲಾಖೆಗಳು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಆರ್‌ಎಲ್‌ಎಚ್‌ಪಿ ಸಂಸ್ಥೆಯ ನಿರ್ದೇಶಕರಾದ ಸರಸ್ವತಿಯವರು ಮಾತನಾಡುತ್ತಾ, ಸಂಸ್ಥೆಯು ಕಳೆದ 40 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಮೈಸೂರು, ಗುಂಡ್ಲುಪೇಟೆ, ಗುಲ್ಬರ್ಗ ಮತ್ತು ಬೀದರ್ ತಾಲ್ಲೂಕಿನಲ್ಲಿ 40 ಯುವಕರ ಗುಂಪುಗಳನ್ನು ರೂಪಿಸಿದ್ದು ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಯೂತ್ ನೆಟ್‌ವರ್ಕ್ ಎಂಬ ತಂಡ ರಚನೆಯಾಗಿದೆ. ಯುವಜನರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಪರಿಸರ ಸಂಬಂಧಿ ಕಾರ್ಯಕ್ರಮಗಳು, ಸಾವಯವ ಗೊಬ್ಬರಗಳ ಬಳಕೆ, ಪ್ಲಾಸ್ಟಿಕ್ ನಿಷೇಧ, ಘನತ್ಯಾಜ್ಯ ಘಟಕ, ಜಾಗತಿಕ ತಾಪಮಾನ ಹಾಗೂ ಪ್ರಕೃತಿ ವಿಕೋಪ ಹೀಗೆ ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಮಕ್ಕಳು, ಮಹಿಳೆಯರು, ಯುವಜನರು ಮತ್ತು ಇಡೀ ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದರು.

ಸಂವಾದ ಕಾರ್ಯಕ್ರಮದಲ್ಲಿ ಯುವಜನರು ಅನೇಕ ವಿಷಯಗಳ ಬಗ್ಗೆ ಗಮನ ಸೆಳೆದರು. ಮೈಸೂರಿನ ಕುಕ್ಕರಹಳ್ಳಿ ಕೆರೆ, ಲಿಂಗಾಂಬುಧಿ ಕೆರೆ, ಉಂಡುಬತ್ತಿ ಕೆರೆ ಹಾಗೂ ಕಾರಂಜಿ ಕೆರೆಗಳು ವಿವಿಧ ಕಾರಣಗಳಿಂದ ಮಲಿನಗೊಳ್ಳುತ್ತಿವೆ. ಆದುದರಿಂದ ಕೆರೆಗಳ ಹೂಳೆತ್ತಿಸುವುದು, ಚರಂಡಿ ಮತ್ತು ಒಳಚರಂಡಿಗಳ ನೀರು ಕೆರೆಗೆ ಸೇರದಂತೆ ಕ್ರಮ ವಹಿಸುವುದು, ಸೈಕಲ್‌ಗಳ ಬಳಕೆಗೆ ಹೆಚ್ಚಿನ ಒತ್ತು ನೀಡುವುದು, ಸೈಕಲ್‌ಗಳು, ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಬಳಸುವಂತೆ ಜಾಗೃತಿ ಮೂಡಿಸುವುದು, ಹೊಸದಾಗಿ ನಿರ್ಮಾಣಗೊಳ್ಳುವ ಎಲ್ಲಾ ಕಟ್ಟಡಗಳಲ್ಲಿಯೂ ಮಳೆನೀರು ಕೊಯ್ಲು ಅಳವಡಿಕೆಯನ್ನು ಕಡ್ಡಾಯಗೊಳಿಸುವುದು, ನಗರದ ರಸ್ತೆ ಅಗಲೀಕರಣ ಮತ್ತು ಹೈದರ್ ಅಲಿ ರಸ್ತೆ, ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆ ಹಾಗೂ ಇತರೆ ರಸ್ತೆಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿಯುತ್ತಿರುವುದನ್ನು ನಿಲ್ಲಿಸುವುದು, ವಾಯುಮಾಲಿನ್ಯವನ್ನು ತಪ್ಪಿಸಲು ನಗರದಲ್ಲಿ ಮತ್ತು ಮುಖ್ಯವಾಗಿ ಚಾಮುಂಡಿ ಬೆಟ್ಟಕ್ಕೆ ಇ.ವಿ.ಎಂ (ವಿದ್ಯುತ್‌ಚಾಲಿತ) ಬಸ್ ಸೇವೆ ಪ್ರಾರಂಭಿಸುವುದು, ನಗರದ ಪ್ರವಾಸಿತಾಣಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ಕನ್ನು ನಿಷೇಧಿಸುವುದು ಹಾಗೂ ಕೇರಳ ಮಾದರಿಯ ಬಾಟಲ್ ಆಕಾರದ ಆಕರ್ಷಕವಾದ ಕಸದ ಬುಟ್ಟಿಗಳನ್ನು ಕಡ್ಡಾಯವಾಗಿ ಇರಿಸುವುದು ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀಮತಿ ವೈ.ಎನ್. ಮಮತ, ಶ್ರೀ ವೆಂಕಟೇಶ್, ಶ್ರೀಮತಿ ಕುಸುಮಾ ಆಯರಹಳ್ಳಿ,

ಶ್ರೀಮತಿ ಹೇಮಲತಾ, ಡಾ. ಎಂ. ಪ್ರಭು, ಡಾ. ಸೋಮಶೇಖರ್, ಪ್ರಾಧ್ಯಾಪಕರು, ಆರ್‌ಎಲ್‌ಎಚ್‌ಪಿ ಸಿಬ್ಬಂದಿವರ್ಗ ಹಾಗೂ 150ಕ್ಕೂ ಹೆಚ್ಚು ಯುವಜನರು ಭಾಗವಹಿಸಿದ್ದರು.

## ಪರಿಸರಸ್ನೇಹಿ ಜೂಪ್ಲಾಂಕ್ಟನ್‌ಗಳು



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೂಪ್ಲಾಂಕ್ಟನ್‌ಗಳ ಗುರುತಿಸುವಿಕೆ ಮತ್ತು ಸಂಸ್ಕರಣೆ ಕುರಿತ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದ ಅಧ್ಯಕ್ಷರಾದ ಡಾ. ಟಿ.ಎಸ್. ಹರ್ಷರವರು ಉದ್ಘಾಟಿಸುತ್ತಿರುವುದು.

"ಜೂಪ್ಲಾಂಕ್ಟನ್‌ಗಳ ಕುರಿತ ಪ್ರಾಯೋಗಿಕ ಮತ್ತು ಸಂಶೋಧನಾತ್ಮಕ ಅಧ್ಯಯನ ಇಂದು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಪರಿಸರಸ್ನೇಹಿಯಾಗಿರುವ ಜೂಪ್ಲಾಂಕ್ಟನ್‌ಗಳು ವಿವಿಧ ಆಯಾಮಗಳಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತಿವೆ. ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಇರಬೇಕು" ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಅಧ್ಯಕ್ಷರಾದ ಡಾ. ಟಿ.ಎಸ್. ಹರ್ಷರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ನಡೆದ ಜೂಪ್ಲಾಂಕ್ಟನ್‌ಗಳ ಗುರುತಿಸುವಿಕೆ ಮತ್ತು ಸಂಸ್ಕರಣೆ ಕುರಿತು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಜೂಪ್ಲಾಂಕ್ಟನ್‌ಗಳು ನೀರಿನಲ್ಲಿ ತೇಲುತ್ತಾ, ತುಂಬಾ ದುರ್ಬಲವಾಗಿ ಈಜುತ್ತಾ ಇರುತ್ತವೆ. ಇವುಗಳ ಗುರುತಿಸುವಿಕೆ ಪ್ರಾಯೋಗಿಕ ಅಧ್ಯಯನದಿಂದ ಮಾತ್ರ ಸಾಧ್ಯ. ಇವುಗಳ ಸಂಸ್ಕರಣೆಯ ಬಗ್ಗೆ ಸರಿಯಾದ ತರಬೇತಿ ಮತ್ತು ತಿಳಿವಳಿಕೆ ಇರಬೇಕು. ಇದರಿಂದ ಆರ್ಥಿಕವಾಗಿಯೂ ಲಾಭಗಳಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ "ಉನ್ನತ ಶಿಕ್ಷಣದಲ್ಲಿ ಕೌಶಲ್ಯಾಧಾರಿತ ಕಲಿಕೆ ಮತ್ತು ಸಂಶೋಧನ ಆಧಾರಿತ ಶಿಕ್ಷಣದ ಅಗತ್ಯ ತುಂಬಾ ಇದೆ. ಕ್ಷೇತ್ರಾಧಾರಿತ ಅಧ್ಯಯನವನ್ನು ಪ್ರಯೋಗಾಲಯದೊಂದಿಗೆ ಸಂಯೋಜಿಸಬೇಕು. ಜೂಪ್ಲಾಂಕ್ಟನ್‌ಗಳು ಮೀನು ಮತ್ತು ಇತರ ದೊಡ್ಡ ಪ್ರಾಣಿಗಳ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಇವುಗಳ ಬಗ್ಗೆ ನಡೆದಿರುವ ಅಧ್ಯಯನಗಳನ್ನು ಅರಿತುಕೊಂಡು ಮುಂದಿನ ದಿನಗಳಲ್ಲಿ ಸಂಶೋಧನಾತ್ಮಕವಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು" ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಭು ಅವರು ಕಾರ್ಯಾಗಾರ ಕುರಿತು ಪರಿಚಯಿಸುತ್ತ, ಕಲಿಕೆ ಅನುಭವಾಧಾರಿತ ಮತ್ತು ಪ್ರಾಯೋಗಿಕವಾಗಿರಬೇಕು. ಜೂಪ್ಲಾಂಕ್ಟನ್‌ಗಳನ್ನು ಗುರುತಿಸುವ ಮತ್ತು ಸಂಸ್ಕರಣೆ ಮಾಡುವ ಹಲವಾರು ವಿಧಾನಗಳು ಚಾಲ್ತಿಯಲ್ಲಿವೆ. ಅವುಗಳನ್ನು ಈ ಕಾರ್ಯಾಗಾರದ ಮೂಲಕ ತಿಳಿದುಕೊಳ್ಳಿ ಎಂದರು.

ಕು. ಚಿನ್ಮಯಿ ಪ್ರಾರ್ಥಿಸಿದರು. ವಿಭಾಗದ ಮುಖ್ಯಸ್ಥರಾದ ಡಾ. ಎಂ. ರಮ್ಯಶ್ರೀ ಸ್ವಾಗತಿಸಿದರು. ಕು. ಮಿಸ್ಬಾ ಅಂಜುಂ ನಿರೂಪಿಸಿದರು. ಕು. ಶೀತಲ್ ವಂದಿಸಿದರು. ಪ್ರಾಧ್ಯಾಪಕರು ಮತ್ತು 60 ಮಂದಿ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಭಾರತ ಜಾಗತಿಕ ಜೀವವೈವಿಧ್ಯತೆಯ ತಾಣ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 'ಜೀವವೈವಿಧ್ಯತೆ ಮತ್ತು ಅದರ ಸಂರಕ್ಷಣೆ' ವಿಷಯ ಕುರಿತ ಕಾರ್ಯಾಗಾರವನ್ನು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ನಿವೃತ್ತ ಹಿರಿಯ ವಿಜ್ಞಾನಿಗಳಾದ ಡಾ. ಟಿ. ತಿಪ್ಪೇಸ್ವಾಮಿಯವರು ಉದ್ಘಾಟಿಸಿ ಮಾತನಾಡಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗಗಳ ವತಿಯಿಂದ ಮೈಸೂರಿನ ವಿಜ್ಞಾನ ಪ್ರತಿಷ್ಠಾನದ ಸಹಯೋಗದೊಂದಿಗೆ ದಿನಾಂಕ 15.10.2025 ರಂದು ವನ್ಯಜೀವಿ ಸಪ್ತಾಹ-2025ರ ಅಂಗವಾಗಿ "ಜೀವವೈವಿಧ್ಯತೆ ಮತ್ತು ಅದರ ಸಂರಕ್ಷಣೆ" ವಿಷಯವಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ನಿವೃತ್ತ ಹಿರಿಯ ವಿಜ್ಞಾನಿಗಳಾದ ಡಾ. ಟಿ. ತಿಪ್ಪೇಸ್ವಾಮಿಯವರು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಪರಿಸರ ಸಮತೋಲನ ಕಾಪಾಡಲು ಜೀವವೈವಿಧ್ಯತೆಯ ಸಂರಕ್ಷಣೆ ಬಹಳ ಅವಶ್ಯಕ. ಭಾರತವು ಸಂಪದ್ಭರಿತ ಜೀವವೈವಿಧ್ಯತೆಯ ತಾಣಗಳಾದ ಪಶ್ಚಿಮಘಟ್ಟ, ಹಿಮಾಲಯ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಂತಹ ಪ್ರದೇಶಗಳನ್ನು ಹೊಂದಿದ್ದು ಇವುಗಳ ರಕ್ಷಣೆ ಅತ್ಯಂತ ಅವಶ್ಯಕವಾಗಿದೆ. ಜನಸಂಖ್ಯಾಸ್ಫೋಟವು ಜೀವವೈವಿಧ್ಯತೆಯ ಮೇಲೆ ತನ್ನ ಪರಿಣಾಮ ಬೀರುವುದರಿಂದ ಜನಸಂಖ್ಯೆಯ ನಿಯಂತ್ರಣವನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಮೈಸೂರಿನ ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಎ.ಎನ್. ಸಂತೋಷ್ ಉಪನ್ಯಾಸದಲ್ಲಿ ಸಸ್ಯ ಮತ್ತು ಪ್ರಾಣಿವರ್ಗಗಳ ಸಮನ್ವಯತೆ ಮತ್ತು ಸಹಬಾಳ್ವೆಯನ್ನು ಕೇಂದ್ರೀಕರಿಸಿ ಜೀವವೈವಿಧ್ಯತೆಯ ವ್ಯಾಪ್ತಿಯನ್ನು ಕುರಿತು ಉಪನ್ಯಾಸ ನೀಡಿದರು.

ಹೋಮಿಯೋಪತಿ ವೈದ್ಯರು ಹಾಗೂ ಸಾವಯವ

ಕೃಷಿಕರಾದ ಡಾ. ಎ.ಪಿ.ಸಿ. ಅಭಿಜಿತ್‌ರವರು, ಜೇಡದ ವಿವಿಧ ಪ್ರಭೇದಗಳನ್ನು ವಿವರಿಸುತ್ತಾ, ಅವುಗಳು ಕಲ್ಲುಹೂಗಳು, ಮರದ ರೆಂಬೆಗಳಲ್ಲಿ ಇರುವೆಗಳಂತೆ ಹೇಗೆ ಅವಿತುಕೊಂಡಿರುತ್ತವೆ ಎಂಬುದನ್ನು ವಿವರಿಸಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷರಾದ ಸಿ. ಕೃಷ್ಣೇಗೌಡ ಹಾಗೂ ಕಾರ್ಯದರ್ಶಿ ಶ್ರೀ ಜಿ.ಬಿ. ಸಂತೋಷ ಕುಮಾರ್ ವೇದಿಕೆಯಲ್ಲಿದ್ದರು. ಅಧ್ಯಾಪಕರು, ವಿದ್ಯಾರ್ಥಿನಿಯರು, ವಿಜ್ಞಾನ ಪ್ರತಿಷ್ಠಾನದ ಸದಸ್ಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. □

## ನೈತಿಕ ಪ್ರಜ್ಞೆಯಿಂದ ಮೂಡುವ ಆನಂದವೇ ಅಮೂಲ್ಯ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ಖ್ಯಾತ ಕಿರುತೆರೆ ನಿರ್ದೇಶಕರಾದ ಶ್ರೀ ಟಿ.ಎನ್. ಸೀತಾರಾಂರವರು ಉದ್ಘಾಟಿಸಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಕಾಲೇಜಿನ ದಿನಗಳು ಅಮೂಲ್ಯವಾದುವು. ಮೌಲ್ಯಯುತ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಾಂಸ್ಕೃತಿಕವಾಗಿಯೂ ವಿದ್ಯಾರ್ಥಿಗಳು ಶ್ರೀಮಂತರಾಗಬೇಕು. ಸಾಂಸ್ಕೃತಿಕ ಚಟುವಟಿಕೆಗಳು ನಮ್ಮ ಪರಂಪರೆಯನ್ನು ಪರಿಚಯಿಸಿ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತವೆ. ಸಮುದಾಯದ ಒಳಗೆ ಸಹಬಾಳ್ವೆಯ ಗೌರವಯುತವಾದ

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ಅಗತ್ಯವಾಗಿವೆ. ಸಾಂಸ್ಕೃತಿಕ ಚಟುವಟಿಕೆಗಳು ನಮ್ಮಲ್ಲಿ ಮನುಷ್ಯತ್ವವನ್ನು ಸದಾ ಜಾಗೃತವಾಗಿಡುತ್ತವೆ. ಸುಖ, ಸಂತೋಷ, ಆನಂದಗಳನ್ನು ಮನುಷ್ಯ ಹೇಗೆ ಅನುಭವಿಸುತ್ತಾನೆ ಎಂಬುದು ಮುಖ್ಯ. ಒಂದು ಸಮಾಜದಲ್ಲಿ ಇರುವ ಜನರ ನೈತಿಕ ಪ್ರಜ್ಞೆಯಿಂದ ಮೂಡುವ ಆನಂದವೇ ಅಮೂಲ್ಯವಾದುದು. ಅದರಿಂದ ಸಮಾಜಕ್ಕೆ ಹೆಚ್ಚು ಉಪಯೋಗ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಇದು ಸಾಧ್ಯವಾಗುತ್ತದೆ ಎಂದು ಖ್ಯಾತ ಕಿರುತೆರೆ ನಿರ್ದೇಶಕರು, ಚಿಂತಕರು ಆದ ಶ್ರೀ ಟಿ.ಎನ್. ಸೀತಾರಾಂರವರು ಅಭಿಪ್ರಾಯಪಟ್ಟರು.

ಸಂಬಂಧವನ್ನು ಕಲ್ಪಿಸುತ್ತವೆ. ಪ್ರತಿಯೊಬ್ಬರೂ ಶಿಕ್ಷಣದ ಜೊತೆ ಸಾಂಸ್ಕೃತಿಕ ಒಳಲೋಕವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮೈಸೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಭಾಸ್ಕರ್ ನಾಯಕ್‌ರವರು ಮಾತನಾಡುತ್ತಾ ಸಾಂಸ್ಕೃತಿಕ ಚಟುವಟಿಕೆ ಮತ್ತು ಕ್ರೀಡೆ ವಿದ್ಯಾರ್ಥಿಗಳಲ್ಲಿ ಶಕ್ತಿಯನ್ನು ತುಂಬುತ್ತವೆ. ಆರೋಗ್ಯವಂತ ದೇಹ ಮತ್ತು ಮನಸ್ಸನ್ನು ಕಾಪಾಡಿಕೊಳ್ಳಲು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ಸಹಕಾರಿಯಾಗಿವೆ. ಈ ರೀತಿಯ ಗುಂಪು ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಪ್ರತಿಭೆ, ನೈಪುಣ್ಯತೆ, ಆತ್ಮವಿಶ್ವಾಸವನ್ನು ಮೂಡಿಸುತ್ತವೆ. ಶಿಕ್ಷಣಕ್ಕೆ ಔದ್ಯೋಗಿಕ ಮತ್ತು ಔದ್ಯಮಿಕ ಆಯಾಮಗಳು ಇರುವಂತೆ ವಿದ್ಯಾರ್ಥಿಗಳಲ್ಲಿ ಗೆಲುವು, ಚೈತನ್ಯ, ಆತ್ಮವಿಶ್ವಾಸ, ಜೀವಪರ ಕಾಳಜಿ ಮತ್ತು ಒಳ್ಳೆಯ ಬದುಕನ್ನು ಕಾಣಲು ಸಾಂಸ್ಕೃತಿಕ ಆಯಾಮವೂ ಅತ್ಯಗತ್ಯ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಶಿಕ್ಷಣದ ಆರಂಭದಿಂದ ಅಂತ್ಯದವರೆಗೂ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳು ಮಹತ್ವವನ್ನು ಪಡೆದುಕೊಂಡಿವೆ. ಸಾಂಸ್ಕೃತಿಕ ಅಭಿರುಚಿಗಳನ್ನು ಬೆಳೆಸಲು ಇಂತಹ ವೇದಿಕೆಗಳು ವಿದ್ಯಾರ್ಥಿಗಳಿಗೆ ಸಹಾಯಕವಾಗಿವೆ. ಇಂತಹ ವೇದಿಕೆಗಳಿಂದ ಅತ್ಯುತ್ತಮ ಪ್ರತಿಭೆಗಳು ಹೊರಹೊಮ್ಮಿವೆ. ಎಲ್ಲಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಎಂದರು.

ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಸಂಘಟನಾ ಚತುರತೆ, ನಾಯಕತ್ವದ ಗುಣ, ಧೈರ್ಯ, ಸದೃಢ ದೇಹ ಮತ್ತು ಮನಸ್ಸು ಉಂಟಾಗುತ್ತದೆ. ಪರಸ್ಪರ ವಿಶ್ವಾಸ ಮತ್ತು ನಂಬಿಕೆಯ ಸಕಾರಾತ್ಮಕ ಆಲೋಚನೆಗಳು ಮೂಡಿ, ವಿಶಾಲ ಮನಸ್ಥಿತಿ ಮೂಡುತ್ತದೆ. ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು. ಮೊಬೈಲ್ ಬಗ್ಗೆ ಇಂದು ನಕರಾತ್ಮಕವಾಗಿ ಚಿಂತಿಸುವವರು ಇದ್ದಾರೆ. ಆದರೆ ಮೊಬೈಲ್ ಮತ್ತು ಇತರ ತಂತ್ರಜ್ಞಾನಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಐಎಎಸ್ ಅಧಿಕಾರಿಯಾಗುವ ಮಟ್ಟಕ್ಕೆ ಏರಿದ ಕೇರಳದ ಮುನ್ನಾರಿನ ಬಡ ಕುಟುಂಬದ, ಎರ್ನಾಕುಲಂ ರೈಲ್ವೆ ನಿಲ್ದಾಣದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಶ್ರೀನಾಥ್ ಅವರೇ ನಮಗೆಲ್ಲ ಒಂದು ಮಾದರಿ. ಬದುಕಿನಲ್ಲಿ ಕನಸು ಮತ್ತು ಸರಿಯಾದ ಗುರಿಗಳು ಇರಬೇಕು. ಅವುಗಳನ್ನು ಸಾಧಿಸಲು ಛಲ ಮತ್ತು ಶ್ರದ್ಧೆ ಇರಬೇಕು ಎಂದು ಅಭಿಪ್ರಾಯಪಟ್ಟರು.

ಶ್ರೀ ಆರ್. ಕಿರಣ್ ಸ್ವಾಗತಿಸಿದರು. ಕು. ಅಂಕಿತಾ ಕುಲಕರ್ಣಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಜಿ.ಎ. ಸುಮಯಾ ಕೌಸರ್ ವಂದಿಸಿದರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಡಾ. ಎಂ.ಪಿ. ಸೋಮಶೇಖರ್, ಕ್ರೀಡಾ ವೇದಿಕೆಯ ಸಂಚಾಲಕರಾದ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕು. ಎಂ.ಜಿ. ಪ್ರಜ್ವಲ್ ನಿರೂಪಿಸಿದರು.


**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**

**ಜನವರಿ 16 ಶುಕ್ರವಾರ**

**ವಿವರಗಳಿಗೆ ಸಂಪರ್ಕಿಸಿ**
**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು ಸುತ್ತೂರು**
**ದೂರವಾಣಿ : 08221-232223, 232224**

## ಮೈಲಾರ ಬಸವಲಿಂಗ ಶರಣರ ತ್ರಿಪದಿಗಳಲ್ಲಿ ಸಾರ್ವಕಾಲಿಕ ಮೌಲ್ಯ




ಮೈಸೂರಿನ ಡಾ. ಎಸ್. ರಾಧಾಕೃಷ್ಣನ್ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ನಡೆದ 330ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ' ವಿಷಯ ಕುರಿತು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡಿದರು. ಶ್ರೀ ಎಚ್.ಆರ್. ವೃಷಭೇಂದ್ರ, ಶ್ರೀಮತಿ ಮೋಹನಕುಮಾರಿಯವರಿದ್ದಾರೆ. (25 ಅಕ್ಟೋಬರ್ 2025)

"ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿಪದಿಗಳು ಸಾರ್ವಕಾಲಿಕ ಮಹತ್ವವುಳ್ಳದ್ದಾಗಿವೆ" ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಹೇಳಿದರು.

**ಮೈಸೂರಿನ ಡಾ. ಎಸ್. ರಾಧಾಕೃಷ್ಣನ್ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ** ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ದಿನಾಂಕ 25.10.2025 ರಂದು ನಡೆದ ಶಿವಾನುಭವ ದಾಸೋಹ ಮಾಲಿಕೆಯ 330ನೆಯ ಕಾರ್ಯಕ್ರಮದಲ್ಲಿ 'ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ' ಕುರಿತು ಉಪನ್ಯಾಸ ನೀಡಿದರು. ಈ ತ್ರಿಪದಿಗಳಲ್ಲಿ ಗುರುವಿನ ಆದರ್ಶಗಳು ಮತ್ತು ಮೌಲ್ಯಗಳು ಹೇರಳವಾಗಿ ವ್ಯಕ್ತವಾಗಿವೆ. ಜನರ ಮನಸ್ಸಿಗೆ ಮುಟ್ಟುವಂತೆ ಅವುಗಳನ್ನು ರಚಿಸಲಾಗಿದೆ. ಅವುಗಳ ತಾತ್ಪರ್ಯ ಮತ್ತು ತಿರುಳು ಎಲ್ಲರಿಗೂ ಸುಲಲಿತವಾಗಿ ಅರ್ಥವಾಗುವಂತಿದೆ ಎಂದು ಹೇಳಿದರು.

ಸರಗೂರು ತಾಲ್ಲೂಕು ತಹಶೀಲ್ದಾರರಾದ ಶ್ರೀಮತಿ ಮೋಹನಕುಮಾರಿಯವರು ಮಾತನಾಡಿ, ಇಂದಿನ ಸಮಾಜದಲ್ಲಿ ಎಲ್ಲರೂ ಒತ್ತಡದ ಬದುಕು ನಡೆಸುತ್ತಿದ್ದಾರೆ. ಅದರಿಂದ ಹೊರಬರಬೇಕಾದರೆ ಇಂತಹ ಉಪನ್ಯಾಸ ಕಾರ್ಯಕ್ರಮಗಳು ಅವಶ್ಯಕ. ಬಸವೇಶ್ವರರ ವಿಚಾರಧಾರೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂದು ಪ್ರಚಲಿತವಾಗಿವೆ. ಆ ಉದಾತ್ತ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನಿವೃತ್ತ ಶಿಕ್ಷಕರಾದ ಶ್ರೀ ಎಂ. ಪರಶಿವಪ್ಪನವರು ಕಾರ್ಯಕ್ರಮದ ಸೇವಾರ್ಥದಾರರಾಗಿದ್ದರು. ಶ್ರೀ ಶಿವರಾತ್ರಿ ರಾಜೇಂದ್ರ ಕಲಾತಂಡದವರು ಭಜನೆ ನಡೆಸಿಕೊಟ್ಟರು. ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಎಚ್.ಆರ್. ವೃಷಭೇಂದ್ರರವರು ಸ್ವಾಗತಿಸಿದರು. ಶ್ರೀ ಓಂಕಾರಪ್ಪನವರು ಕಾರ್ಯಕ್ರಮ ನಿರೂಪಿಸಿದರು.

## ವಿಶ್ವ ಆಹಾರ ದಿನಾಚರಣೆ

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ ವಿಭಾಗದ ವತಿಯಿಂದ ದಿನಾಂಕ 16.10.2025 ರಂದು ವಿಶ್ವ ಆಹಾರ ದಿನಾಚರಣೆಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಮತ್ತು ಪೌಷ್ಟಿಕಶಾಸ್ತ್ರ ವಿಭಾಗದ ನಿವೃತ್ತ ಹಿರಿಯ ಪ್ರಾಧ್ಯಾಪಕರಾದ ಡಾ. ಅಸ್ನಾ ಉರೂಜ್‌ರವರು ಮಾತನಾಡಿ ವಿಶ್ವ ಆಹಾರ ದಿನವನ್ನು ಇಂದು 150ಕ್ಕೂ ಅಧಿಕ ರಾಷ್ಟಗಳು ಆಚರಿಸುತ್ತಿವೆ. ನಾಗಾಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆಯನ್ನು ಒದಗಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಭಾರತವು ಸಕ್ರಿಯವಾಗಿ ಈ ದಿನವನ್ನು ದೇಶಾದ್ಯಂತ ಆಚರಿಸುತ್ತಿದೆ. ಆಹಾರ ಭದ್ರತೆಯ ಜೊತೆಗೆ ಪೌಷ್ಟಿಕ ಆಹಾರವನ್ನು ಸಮುದಾಯಕ್ಕೆ ಒದಗಿಸುವುದು ನಮ್ಮೆಲ್ಲರ ಆದ್ಯ ಜವಾಬ್ದಾರಿಯಾಗಿರಬೇಕು. ಯಾವುದೇ ವಸ್ತುಗಳನ್ನು ಬಳಕೆ ಮಾಡದೆ ಇದ್ದರೆ, ಮರು ಉಪಯೋಗ ಮಾಡಬಹುದು ; ಆದರೆ ಆಹಾರವನ್ನು ಸರಿಯಾಗಿ ಬಳಸದೆ ವ್ಯರ್ಥಮಾಡಿದರೆ ಅದನ್ನು ಮರು ಉಪಯೋಗ ಮಾಡಲಾಗದು. ಅದು ಒಂದು ರಾಷ್ಟ್ರಕ್ಕೆ ಆಗುವ ದೊಡ್ಡ ನಷ್ಟ. ಆದ್ದರಿಂದ ಆಹಾರದ ಭದ್ರತೆಯೊಂದಿಗೆ ಪೌಷ್ಟಿಕ ಆಹಾರವನ್ನು ವ್ಯರ್ಥ ಮಾಡದೆ ಹಿತಮಿತವಾಗಿ ಬಳಸುವುದರತ್ತ ನಮ್ಮ ನಡಿಗೆ ಸಾಗಬೇಕಾಗಿದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣ ಹಾಗೂ ವಿಭಾಗದ ಮುಖ್ಯಸ್ಥರು ಮತ್ತು ಅಧ್ಯಾಪಕರುಗಳು ಉಪಸ್ಥಿತರಿದ್ದರು, ವಿದ್ಯಾರ್ಥಿಗಳೇ ತಯಾರಿಸಿದ ವಿವಿಧ ಆಹಾರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿತ್ತು. ಕು. ಕವನ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಹರ್ಷಿತಾ ಸ್ವಾಗತಿಸಿದರು, ಮತ್ತು ಕು. ರಿಷಿಕಾ ನಿರೂಪಿಸಿ, ವಂದಿಸಿದರು.

## ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು ಮತ್ತು ಸವಾಲುಗಳು

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 29.10.2025 ರಂದು ನಡೆದ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ "ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು : ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು" ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಮೈಸೂರು ಸ್ಟೇಟ್ ಬ್ಯಾಂಕ್ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ಸಂಸ್ಥೆಯ ಮೈಸೂರಿನ ವ್ಯವಸ್ಥಾಪಕ ಮತ್ತು ನಿರ್ದೇಶಕರಾದ ಶ್ರೀ ದಿವಾಕರ್ ಝಾ ಅವರು ಉದ್ಘಾಟಿಸಿ ಮಾತನಾಡಿದರು. ಬ್ಯಾಂಕಿಂಗ್ ವ್ಯವಸ್ಥೆಯು ದೈನಂದಿನ ಜೀವನಕ್ಕೆ ಉತ್ತಮ ಸೇವೆ ಮತ್ತು ನಾವೀನ್ಯತೆ ಒದಗಿಸುವಲ್ಲಿ ಸಕ್ರಿಯವಾಗಿದೆ. ಹಣಕಾಸು ಸೇರ್ಪಡೆಯು ಪ್ರತಿಯೊಬ್ಬ ವ್ಯಕ್ತಿಯನ್ನೂ ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಗೆ ತಂದಿದೆ. ನಿಜವಾದ ಫಲಾನುಭವಿಗಳಿಗೆ ನೇರ ಲಾಭ ವರ್ಗಾವಣೆಯನ್ನು ಖಾತ್ರಿಪಡಿಸಿರುವ ಪ್ರಧಾನಿಯವರ ಜನ್-ಧನ್ ಯೋಜನೆ ಈ ದಿಸೆಯಲ್ಲಿ ಪ್ರಮುಖವಾದುದು. ಜೊತೆಗೆ ಹಸಿರು ಬ್ಯಾಂಕಿಂಗ್ ಉಪಕ್ರಮಗಳು ಪರಿಸರ ಸುಸ್ಥಿರತೆಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ತಿಳಿಸಿದರು.

ಕೊಯಮತ್ತೂರಿನ ಭಾರತಿಯಾರ್ ವಿಶ್ವವಿದ್ಯಾಲಯದ ಐಪಿಆರ್ ನಿರ್ದೇಶಕರು ಮತ್ತು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಸುಮತಿಯವರು ಮಾತನಾಡುತ್ತಾ ಬ್ಯಾಂಕಿಂಗ್ ವ್ಯವಸ್ಥೆಯು ಭಾರತದ ಜಾಗತಿಕ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 'ಬ್ಯಾಂಕಿಂಗ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳು: ಸವಾಲುಗಳು, ನಾವೀನ್ಯತೆ ಮತ್ತು ನೀತಿ ಪ್ರತಿಕ್ರಿಯೆಗಳು' ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಮೈಸೂರು ಸ್ಟೇಟ್ ಬ್ಯಾಂಕ್ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ಸಂಸ್ಥೆಯ ಮೈಸೂರಿನ ವ್ಯವಸ್ಥಾಪಕ ಮತ್ತು ನಿರ್ದೇಶಕರಾದ ಶ್ರೀ ದಿವಾಕರ್ ಝೂರವರು ಉದ್ಘಾಟಿಸಿ ಮಾತನಾಡಿದರು.

ಭಾರತವೇ ಜಗತ್ತಿನ ಪ್ರಮುಖ ಕಚೇರಿಯಾಗಿದೆ. ಬ್ಯಾಂಕಿಂಗ್ ಕ್ಷೇತ್ರದ ಪರಿವರ್ತನಾತ್ಮಕ ಪ್ರಗತಿಯು ದೇಶದ ಕ್ಷಿಪ್ರ ಬೆಳವಣಿಗೆಗೆ ಕಾರಣವಾಗಿದೆ. ಆದರೆ ಹೆಚ್ಚುತ್ತಿರುವ ಸೈಬರ್ ಭದ್ರತಾ ಬೆದರಿಕೆಗಳ ಬಗ್ಗೆ ಎಚ್ಚರಿಕೆ ವಹಿಸಿ, ಗ್ರಾಹಕರು ಜಾಗರೂಕರಾಗಿರಬೇಕೆಂದು ಹೇಳಿದರು.

ಮೈಸೂರಿನ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾರವರು ಮಾತನಾಡುತ್ತಾ, ಪ್ರಗತಿಗಾಗಿ ನಾವೀನ್ಯತೆಯನ್ನು ಅಳವಡಿಸಿಕೊಳ್ಳುವ ಅಗತ್ಯತೆಯಿದೆ. ಇತ್ತೀಚಿನ ಬ್ಯಾಂಕಿಂಗ್ ಬೆಳವಣಿಗೆಗಳು ಭಾರತದ ಜಾಗತಿಕ ಸ್ಥಾನಮಾನವನ್ನು ಉನ್ನತೀಕರಿಸಿವೆ. ಅವಕಾಶಗಳ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರವು ಗಣನೀಯ ಸವಾಲುಗಳನ್ನೂ ಸಮರ್ಥವಾಗಿ ಎದುರಿಸಿದೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ರೇಚಣ್ಣ, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ವಿ. ಗಂಗಾಧರಸ್ವಾಮಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕು. ನಿಖಿತಾ ಭಟ್ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಕವನ ಸ್ವಾಗತಿಸಿದರು. ಕು. ಕೆ.ವಿ. ಐಶ್ವರ್ಯ ವಂದಿಸಿದರು. ಕು. ಬಿ.ಎಸ್. ವಿನುತ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನೆಯ ನಂತರ ಎರಡು ತಾಂತ್ರಿಕ ಗೋಷ್ಠಿಗಳು, ಸಂವಾದಗೋಷ್ಠಿ ಮತ್ತು ಎರಡು ಪ್ರಬಂಧಮಂಡನೆಯ ಪರ್ಯಾಯ ಗೋಷ್ಠಿಗಳು ನಡೆದವು. ಒಟ್ಟಾರೆ 51 ಪ್ರಬಂಧಗಳನ್ನು ಅಧ್ಯಾಪಕರು ಹಾಗೂ ಸಂಶೋಧಕರು ಮಂಡಿಸಿದರು. "ಗಿಫ್ಟ್ ಸಿಟಿ ಮೂಲಕ ಜಾಗತಿಕ ಒಮ್ಮುಖ : ಭಾರತದ ಆರ್ಥಿಕ ಭವಿಷ್ಯವನ್ನು ರೂಪಿಸುವುದು" ಎಂಬ ವಿಷಯ ಕುರಿತಾದ ಸಂವಾದಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ. ಮಹದೇವಪ್ಪ ಮತ್ತು ಡಾ. ಕೆ. ನಾಗೇಂದ್ರ ಬಾಬು,

ಮೈಸೂರು ಯೂನಿಯನ್ ಬ್ಯಾಂಕ್‌ನ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಜಿ. ರಾಜ್‌ಕುಮಾರ್, ಮೈಸೂರು ಸ್ಟೇಟ್ ಬ್ಯಾಂಕ್ ಇನ್ಸ್‌ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್‌ನ ಮುಖ್ಯ ವ್ಯವಸ್ಥಾಪಕರಾದ ಶ್ರೀ ಕೆ.ಎಲ್. ಅಭಯಪ್ರಕಾಶ್ ಅವರುಗಳು ಭಾಗವಹಿಸಿದ್ದರು.

ಮೊದಲನೆಯ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿನ ವ್ಯವಹಾರ ನಿರ್ವಹಣಾ ಅಧ್ಯಯನ ಕೇಂದ್ರದ ಡೀನ್ ಮತ್ತು ಪ್ರಾಧ್ಯಾಪಕರಾದ ಡಾ. ಪಿ. ನಾಗೇಶ್ 'ಬ್ಯಾಂಕಿಂಗ್‌ನ ಭವಿಷ್ಯವನ್ನು ನ್ಯಾವಿಗೇಟ್ ಮಾಡುವುದು: ನಾವಿನ್ಯತೆ ಮತ್ತು ಅಡಚಣೆ' ವಿಷಯ ಕುರಿತು ಮಾತನಾಡಿದರು. ಎರಡನೆಯ ಗೋಷ್ಠಿಯಲ್ಲಿ ಮೈಸೂರು ಸ್ಟೇಟ್ ಬ್ಯಾಂಕ್ ಕಲಿಕೆ ಮತ್ತು ಅಭಿವೃದ್ಧಿ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರಾದ ಶ್ರೀ ಎಸ್.ಎಸ್. ಬೆಲ್ಕೋಟೆಯವರು 'ಬ್ಯಾಂಕಿಂಗ್‌ನಲ್ಲಿ ನಿಯಂತ್ರಕ ಮತ್ತು ನೀತಿ ಬೆಳವಣಿಗೆಗಳು' ಎಂಬ ವಿಷಯ ಕುರಿತಂತೆ ಮಾತನಾಡಿದರು.

---

## ಫುಟ್‌ಬಾಲ್ ಪಂದ್ಯಾವಳಿಯಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಮೈಸೂರಿನಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಸುತ್ತೂರಿನ ಜೆಎಸ್‌ಎಸ್ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ಮುಖ್ಯೋಪಾಧ್ಯಾಯರುಗಳು, ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರುಗಳು ಹಾಗೂ ವಿಜೇತ ವಿದ್ಯಾರ್ಥಿಗಳಿದ್ದಾರೆ. (18 ಅಕ್ಟೋಬರ್ 2025)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 284ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂ. ಪ್ರವೀಣ್ ಗೋಡ್ಖಿಂಡಿ ಹಾಗೂ ವಿದ್ವಾನ್ ಆರ್. ಕುಮರೇಶ್‌ರವರು ಬಾನ್ಸುರಿ ಮತ್ತು ವಯೊಲಿನ್ ವಾದನಗಳ ಜುಗಲ್‌ಬಂದಿ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ರವೀಂದ್ರ ಯಾವಗಲ್ ಹಾಗೂ ವಿದ್ವಾನ್ ಅರ್ಜುನ್ ಕುಮಾರ್‌ರವರುಗಳಿದ್ದಾರೆ (7 ಅಕ್ಟೋಬರ್ 2025)




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಗಾಂಧಿ ಜಯಂತಿ ಕಾರ್ಯಕ್ರಮವು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಕಾಲೇಜಿನ ಅಧ್ಯಾಪಕ ಮತ್ತು ಅಧ್ಯಾಪಕೇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. (2 ಅಕ್ಟೋಬರ್ 2025)

## World Space Week Celebrated



In collaboration with URSC-ISRO, Bengaluru and Gravity Science Foundation, Chamarajanagara, the World Space Week was celebrated at **JSS Public School, Ooty**, on 7.10.2025. The day-long celebration was conducted as part of the World Space Week (October 4th-10th), invoking the blessings of the Swamijis.

The welcome address was delivered by Ms. Iknoor Kaur, Grade 10 student. Her address highlighted the theme of this year's celebration - "Living in Space" - and she welcomed the guests from the U.R. Rao Satellite Centre, Bengaluru, and the Gravity Science Foundation, Chamarajanagara.

The felicitation ceremony that followed where the dignitaries were honoured by Dr. Anitha Ramesh, Principal, Sri Muddumahadev, Vice-Principal, Sri Prajwal, Assistant Administrative Officer, Ms. Sumathi, Academic Co-ordinator, Dr. K.P. Arun, Vice-Principal, JSS College of Pharmacy, Ooty, and Sri Basavanna, Administrative Officer, JSS College of Pharmacy.

The highlight of the day was a thought-provoking address by Dr. Ramanagouda V. Nadagouda, Associate Director and Distinguished Scientist, URSC-ISRO, Bengaluru. He ignited curiosity among the students as he spoke about India's remarkable achievements in space research, including the recent NISAR Mission, a collaborative project between ISRO and NASA, launched in July 2025.

He paid great tributes to the visionaries of ISRO such as Dr. Vikram Sarabhai and Prof. U.R. Rao, whose

pioneering efforts laid a firm foundation for India's space journey. He stressed the importance of the World Space Week which serves as a means to create awareness and participation in space exploration, which contributes to national development.

Dr. Nadagowda also expressed deep gratitude to his team of scientists and acknowledged the leadership of Dr. A.S. Kiran Kumar, Former Chairman, ISRO, and the efforts of Sri A.S. Abhishek, Founder and Secretary of the Gravity Science Foundation, Chamarajanagara, who has, at this young age, dedicated himself to spreading scientific awareness and supporting education among the underprivileged.

Dr. Nadagouda concluded his inspiring talk by encouraging the students to think, plan, and work to achieve success and hoped to see some JSS Public School students at ISRO in the coming days. He extended heartfelt thanks to JSS Mahavidyapeetha, JSS College of Pharmacy and JSS Public School, for their hospitality and warm gesture.

Sri A.S. Abhishek later captivated the students with an engaging and humorous session. Through a purposeful interactive discussion, he emphasized that curiosity is the mother of all inventions and that science is not merely a subject, but a way of life. His words inspired the youngsters to think critically, ask questions, and explore the unknown with courage and creativity.

The post-lunch session featured an on-the-spot speaking competition, where ten students volunteered to speak on science-related topics. Their spontaneous speeches reflected their remarkable confidence and creativity, leaving the dignitaries - Smt. Rajeshwari, Smt. Rachana, and Sri Vishnu Kumar Pai - from ISRO, deeply impressed. The winners were honoured with books and certificates.

Dr. Anitha Ramesh, Principal, expressed her sincere gratitude to the guests and extended special thanks to JSS Mahavidyapeetha for its continuous encouragement and support. As a token of appreciation, the dignitaries presented to the Principal a souvenir of a spacecraft model.

The event concluded with vote of thanks by Master Advait, Grade 10 student. The programme was compered by Smt. Brinda, Head of the Department of English.

The celebration came to an end with the students' visit to the "Space on Wheels" exhibition, a mobile science bus displaying intricate models of rockets and satellites launched by ISRO and also providing kits to the students.

## World Food Day Celebrated

World Food Day and the inauguration of the Microvision Club was observed at **JSS College for Women, Saraswathipuram, Mysuru**, on 16.10.2025. Dr. Prakash M. Halami, Chief Scientist and Head of the Department of Microbiology and Fermentation Technology, CFTRI, Mysuru, emphasized the pivotal role of microbial additives in delivering healthy nutrition for the posterity. He highlighted the importance of food security and outlined strategies to combat food insecurity. Dr. Halami noted that India has the potential to become the world's food basket through sustainable practices in agriculture. He also stressed the need to raise awareness about malnutrition and leverage sustainable agriculture to address this global challenge.

Dr. Rechanna, Principal and Sri M. Girish, Head, Department of Microbiology were present. Staff members and students attended the programme.

Kum. Dhathri and group rendered the invocation. Kum. M. Haripriya, III B.Sc. welcomed the gathering. Kum. B.K. Prakruthi, III B.Sc. proposed the vote of thanks. Kum. U.K. Hemalatha, III B.Sc. compered the programme.

□

## Workshop on GST 2.0 Held

A workshop on GST 2.0 was organized by the Dept. of Economics, **JSS College for Women, Saraswathipuram, Mysuru** on 10.10.2025. After inaugurating the workshop, Dr. Jagadish, Assistant Professor of Economics, Government First Grade College, Nanjangudu, opined that GST 2.0 is instrumental in the development of the nation and the growth of New India. He noted that GST was initially implemented in various forms. It has since been beneficial for even daily wage workers, farmers, artisans and those involved in small scale industries. Additionally, GST offers concessions in the fields of healthcare and education. He emphasized that GST also plays a significant role in promoting social security, employment opportunities and tax incentives while addressing the challenges to build a robust India.

Dr. Rajshekhar, Professor at the Postgraduate Department of Economics, stated that taxation contributes to national growth and has significantly expanded the nation's tax base. He urged that taxes accepted by both the state and central governments should be used for the development of

a new and better India.

Dr. Rechanna, Principal and Dr. Roopa, Head, Department of Economics were present. Faculty and students participated in the programme.

Kum. M.S. Chandana and group rendered the invocation. Kum. B.R. Satwika, III BA, welcomed the gathering. Kum. N.S. Sanjana, III BA, delivered the vote of thanks. Kum. Rakshita Ranganath Gama, III BA, compered the program.

□

## Workshop on Innovative Learning

The Institutional Innovation Council, JSS College for Women, Saraswathipuram, Mysuru, in association with the Internal Quality Assurance Cell, organized a workshop on "Innovative Learning Using AI Tools", on 16.10.2025.

The workshop was inaugurated by Dr. H.Y. Vani, Associate Professor, Department of Information Science and Engineering, SJCE, Mysuru. In her address, she elaborated the significance of Artificial Intelligence in enhancing innovative teaching and learning practices. She also demonstrated various AI tools that can help both teachers and students in developing creativity, improving productivity and facilitating effective learning experiences.

Faculty members and postgraduate students actively participated in the workshop and gained valuable insights into integrating AI tools in academic and research activities.

Dr. Rechanna, Principal presided over the function. Dr. Dukanya, Convenor, Institutional Innovation Council, Committee Members and faculty members were present. Ms. Sahana and Ms. Thanushree, II M.Sc. student rendered invocation. Ms. Harshitha welcomed the gathering. Ms. B.S. Pragathi, II M.Sc. student proposed the vote of thanks; Ms. Manasa, II M.Sc. student compered the programme.

## Workshop on Wildlife Week Held

Department of Botany and Zoology, JSS College for Women, Mysuru in association with Mysore Science Foundation, Mysuru organized a one-day workshop on 15.10.2025, on the eve of Wildlife Week-2025. The topic of the workshop was "Biodiversity and its Conservation".




Dr. T. Thippeswamy, Former Senior Scientist, Central Sericultural Research and Training Institute, Mysuru inaugurated the workshop. In his speech, he stressed on the need to protect wildlife to maintain ecological balance. People in India are blessed with rich biodiversity regions like Western Ghats, Himalayas, Andaman and Nicobar Islands, and, it will have essential to protect the biodiversity and to control population since it has adverse effects on biodiversity, he opined.

The inauguration was followed by sessions on "Biodiversity and its conservation" by Dr. Santhosh Kannada and on "Spiders" by Dr. A.P.C. Abhijith.

Dr. A.N. Santhosh Kannada, in his speech, focussed on co-existence and co-ordination among flora and fauna. Dr. A.P.C. Abhijith described different species of spiders and explained as to how spiders are camouflaged with lichens, tree branches, ants etc.

In the afternoon session, students received hands-on training on insect pinning and learnt the technique of doing it.

Dr. Rechanna, Principal presided over the function. Sri C. Krishnegowda, President and Sri G.B. Santhosh Kumar, Secretary, Mysore Science Foundation, Mysuru were also present on the dais. Faculty members, students, office bearers and members of Mysore Science Foundation participated in the workshop.

□

## Best Poster Award



The 17th International Annual Convention of the Indian Speech and Hearing Association, Kerala State Branch (ISHA-KSB) was held on the 10th and 11th October 2025 at Thiruvananthapuram. The convention brought together professionals, researchers, and students from across South India to share the latest research findings and clinical innovations in the fields of speech, language, and hearing sciences.

A poster presentation on "Smooth Pursuit Efficiency in Bharatanatyam Dancers: Evidence from Video-Nystagmography Assessments" was held at this event. The best paper award was bagged by Ms. Nikitha Harti and Sri Fawaaz N. Sab, undergraduate students of JSS Institute of Speech and Hearing, Dharwad, along with Sri Praveen Prakash, Assistant Professor in Audiology, and Smt. K. Roshni, Clinical Audiologist.

Ms. Nikitha Harti presented the poster at the convention. The study explored the efficiency of smooth pursuit eye movements in trained Bharatanatyam dancers using video-nystagmography (VNG), providing novel insights into the influence of dance-based sensory-motor training on oculomotor control.

In recognition of this achievement, the authors of the study were honoured by the Administrative Officer, JSS Mahavidyapeetha, Dharwad.

## Alumni Meet : A Resounding Success



The Annual Alumni Meet of JSS Public School, J.P. Nagar, Mysuru was held on 26.10.2025 at the school premises fostering a vibrant atmosphere, nostalgia, networking and reconnection. The event brought together a number alumni to celebrate and share their vintage memories.

The programme started with welcome and registration. The alumni were received by senior teachers. The event commenced at 11.00 am with a welcome address. The inauguration was done by lighting the lamp and floral offering to the portrait of H.H. Dr. Sri Shivaratri Rajendra Mahaswamiji, followed by a lively performance by the present students and the alumni.

The alumni shared their memories and recalled their student days. They remembered that the school has built strong wings to fly high in their future endeavours. They also said that they are proud to call themselves the students of this School.

A highlight of the event was a tour of the campus by the alumni revisiting their old classrooms and sharing memories with their peers. The excitement and joy in the eyes of alumni were overwhelming as they reconnected with their old friends and teachers.

The formal function concluded with a vote of thanks expressing gratitude to all the attendees, and organizers and the management for their support in making the event a grand success.

The alumni were felicitated with mementos acknowledging their participation and presence. The meet ended with a good lunch.

## JSS AHER Forges Landmark Partnership

In a significant leap in medical innovation, JSS Academy of Higher Education and Research (JSS AHER), Mysuru, emerged as a pivotal Indian partner in groundbreaking AI studies led by Google Research. These landmark investigations, poised to reshape the future of diagnostic medicine, have recently been published in Nature (a prestigious science journal) in two separate articles. Dr. Vikram Patil from JSS AHER served as a Lead Principal Investigator from India, underscoring the institution's crucial contribution to this global endeavour.

This collaboration highlights JSS AHER's unwavering commitment to advancing healthcare through cutting-edge research and its robust capacity for international scientific breakthroughs. The studies focused on "Articulate Medical Intelligence Explorer" (AMIE), a revolutionary Large Language Model (LLM)-based AI system developed by Google Research, designed to enhance diagnostic capabilities and physician-patient interactions.

**AMIE: Pioneering Conversational Diagnostics**

One of the articles published in Nature titled "Towards conversational diagnostic artificial intelligence," introduces AMIE as an AI system optimized for diagnostic dialogue. This rigorous study compared AMIE's performance to that of primary care physicians in text-based consultations with patient-actors. The findings showed AMIE - demonstrated good diagnostic accuracy and excelled across most evaluation parameters, including history taking, management, communication skills, and empathy, as assessed by specialist physicians and patient-actors. Notably, the study encompassed diverse scenarios from healthcare providers in Canada, the United Kingdom, and India. JSS AHER's partnership was instrumental in conducting the Objective Structured Clinical Examination (OSCE) study in India, with simulated scenarios specifically crafted by JSS AHER faculty for the Indian components, adding crucial real-world applicability to the research.

**Enhancing Differential Diagnosis Accuracy**

Another article in Nature titled, "Towards accurate differential diagnosis with large language models," explores AMIE's capabilities, particularly its optimization for diagnostic reasoning and generating comprehensive differential diagnoses. In this study, clinicians evaluated challenging, real-world medical cases

both independently and with AMIE's assistance. The results were compelling and clinicians who utilized AMIE as an aid achieved higher differential diagnosis quality scores. This underscores AMIE's potential as a powerful assistant capable of augmenting clinical decision-making.

**JSS AHER's Vital Contribution**

Google Research specifically credited JSS Academy of Higher Education and Research for their partnership in conducting the OSCE study in India. This acknowledgment solidifies our direct and significant involvement in the research, showcasing Indian expertise at the forefront of global AI in healthcare. Dr. Vikram Patil's leadership as a Lead PI from India was vital in navigating the complexities of implementing such a study, in the Indian healthcare context.

These publications mark a significant milestone in the application of AI in medicine. The collaborative efforts between JSS AHER and Google Research pave the way for a future where AI systems like AMIE can greatly enhance the accessibility and quality of medical care, ultimately benefiting patients worldwide.

## Jayanthi Celebrations Held

The JSS Institute of Naturopathy and Yogic Sciences, Coimbatore, observed the 110th Jayanthi Mahotsava of H.H. Jagadguru Dr. Sri Shivarathri Rajendra Mahaswamiji, Founder of JSS Mahavidyapeetha, Mysuru, on 29.9.2025, at the College Auditorium. The celebration was held with devotion and solemnity, under the Divine Blessings of H.H. Jagadguru Sri Shivarathri Deshikendra Mahaswamiji, Jagadguru Sri Veerasimhasana Mahasamsthana Math, Suttur Srikshetra.

The programme was graced by Dr. B. Sheela, Principal of Palakkad Institute of Medical Sciences, Walayar, Kerala, who was the Chief Guest and addressed the gathering, emphasizing the vision of JSS Mahavidyapeetha in advancing health and education. Dr. V. Prathibha, Block Medical Officer, Arisipalayam, Coimbatore, was the Guest of Honour who highlighted the importance of community health initiatives, commending the institution for its commitment to social responsibility.

As part of the celebrations, several service-oriented and educational activities were organized. A blood donation camp was conducted in

collaboration with Coimbatore Medical College and Hospital, where 71 members, including students and staff, came forward voluntarily to donate blood, embodying the values of compassion and service, championed by His Holiness. An essay competition was also organized for the students, providing them an opportunity to articulate their reflections on the ideals of service, education, and holistic living.

Dr. V.R. Dhilip, Principal, emphasized the institution's key milestones and strategic collaborations with many leading organizations. He underscored its unwavering commitment to holistic health, particularly through the integration of yoga, naturopathy, and impactful community outreach initiatives.

The cultural programmes included a Bharatanatyam performance by Ms. Balakrisha, a IInd student, and, an Artistic Yoga demonstration by final year students, showcasing the synthesis of art, yoga and wellness.

Sri Shanmugam, Administrative Officer, delivered the welcome address, expressing remarkable vision and contributions of H.H. Jagadguru Dr. Sri Shivarathri Rajendra Mahaswamiji. He expressed his gratitude to the present pontiff, Jagadguru Sri Shivarathri Deshikendra Mahaswamiji, for his dedicated leadership in promoting value-based education and enhancing healthcare services.

The event was co-ordinated by Dr. Lina Mathew who acted as the Master of Ceremonies. Dr. Kanisha Rani presented the vote of thanks.

## Water Bloom (Algae Bloom) results in death of Aquatic Animals

Department of Microbiology, JSS College for Women, Saraswathipuram, Mysuru conducted an "Extension Activity" under its Microvision Club on 28.10.2025 at Government High School, Kukkarahalli, Mysuru, to create awareness on conservation of water bodies from pollution. Sri M. Girish, Head Department of Microbiology explained about "Water Bloom - Causes and Control" and highlighted about the hazards of algael bloom which results in the death of aquatic creatures. Under the guidance of faculty members of the Department, students of 9th standard curiously observed and identified different species of cyanobacteria, under the microscope that are responsible for the water bloom. Sri Chandra, Head Master and Sri Vajramuni, Science Teacher, of Kukkarahalli School extended their support in organizing the programme.



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅವರನ್ನು ಸನ್ಮಾನಿಸಿ ಗೌರವಿಸಿದರು. ಚಿತ್ರದಲ್ಲಿ ಶ್ರೀ ಡಿ. ಸುರೇಂದ್ರಕುಮಾರ್ ಹಾಗೂ ಶ್ರೀ ಡಿ. ಶ್ರೇಯಸ್‌ಕುಮಾರ್‌ರವರುಗಳನ್ನು ಕಾಣಬಹುದು. (29 ಅಕ್ಟೋಬರ್ 2025)



ನಂಜನಗೂಡಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವಿವಿಧ ಸಂಘಸಂಸ್ಥೆಗಳು ಹಾಗೂ ನಾಗರಿಕರ ಸಹಯೋಗದೊಂದಿಗೆ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಸಿ. ಸೋಮಶೇಖರ್, ಶ್ರೀ ದರ್ಶನ್ ಧ್ರುವನಾರಾಯಣ್, ಶ್ರೀ ಬಿ. ಹರ್ಷವರ್ಧನ್ ಹಾಗೂ ಶ್ರೀ ಕಳಲೆ ಕೇಶವಮೂರ್ತಿಯವರುಗಳಿದ್ದಾರೆ (23 ಅಕ್ಟೋಬರ್ 2025)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 10, Issue No. 11, November 2025**



ಸುತ್ತೂರು ಶ್ರೀಕ್ಷೇತ್ರದಲ್ಲಿ 2026ರ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಮಂಟಪಗಳ ಭೂಮಿ ಪೂಜೆಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಚಿತ್ರದಲ್ಲಿ ವಿವಿಧ ಮಠಾಧೀಶರುಗಳಿದ್ದಾರೆ (25 ನವೆಂಬರ್ 2025)

**ಸುತ್ತೂರು ಜಾತ್ರಾ ಮಹೋತ್ಸವ – ಜನವರಿ 2026**

| | |
|---|---|
| **15 ಗುರುವಾರ** | ಉತ್ಸವಮೂರ್ತಿ ಗದ್ದುಗೆಗೆ ಬಿಜಯಂಗೈಸುವುದು |
| **16 ಶುಕ್ರವಾರ** | ಹಾಲ್ಹರವಿ ಉತ್ಸವ, ಶ್ರೀ ಸೋಮೇಶ್ವರಸ್ವಾಮಿ ಕುಂಭಾಭಿಷೇಕ<br>ಶ್ರೀ ವೀರಭದ್ರೇಶ್ವರ ಕೊಂಡೋತ್ಸವ<br>**ಸಾಮೂಹಿಕ ವಿವಾಹ** |
| **17 ಶನಿವಾರ** | **ರಥೋತ್ಸವ** |
| **18 ಭಾನುವಾರ** | ಶ್ರೀ ಮಹದೇಶ್ವರ ಕೊಂಡೋತ್ಸವ<br>ಲಕ್ಷದೀಪೋತ್ಸವ, ಶ್ರೀ ಮಹದೇಶ್ವರ ಮುತ್ತಿನ ಪಲ್ಲಕ್ಕಿ ಉತ್ಸವ |
| **19 ಸೋಮವಾರ** | **ತೆಪ್ಪೋತ್ಸವ** |
| **20 ಮಂಗಳವಾರ** | ಅನ್ನಬ್ರಹ್ಮೋತ್ಸವ, ಉತ್ಸವಮೂರ್ತಿ ಶ್ರೀಮಠಕ್ಕೆ ಬಿಜಯಂಗೈಸುವುದು |

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 e-mail: varthapathra@jssonline.org website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**